# ಸಾಧ್ವಿ

## ಮುರಿಗೆಮ್ಮ ನಿಜಲಿಂಗಪ್ಪ

ಶ್ರೀಮತಿ ಮುರಿಗೆಮ್ಮ ಮತ್ತು ಶ್ರೀ ನಿಜಲಿಂಗಪ್ಪ

# ಮಹಾಚೇತನ

ಪಾರ್ವತಮ್ಮ ಮಹಲಿಂಗಶೆಟ್ಟಿ, ಹುಬ್ಬಳ್ಳಿ

ಪ್ರಕಟಣೆ
**ಶ್ರೀ ಎಸ್. ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್ (ರಿ.)**
ರೂಮ್ ನಂ. 314, ಎಂ. ಚಿನ್ನಸ್ವಾಮಿ ಸ್ಟೇಡಿಯಂ, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು – 560 001

ಸಹಕಾರ
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ,** ಬೆಂಗಳೂರು



**ಡಾ। ಜಸ್ಟೀಸ್ ವಿ.ಎಸ್. ಮಳಿಮಠ**

ಅಧ್ಯಕ್ಷರು

ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು

# ಮುನ್ನುಡಿ

"ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾರೆ" ಎನ್ನುವುದು ಬಹಳ ಹಳೆಯ ನಾಣ್ಣುಡಿ.

ಈ ನಾಡುಕಂಡ ಸಹೃದಯ, ಸತ್ಸವಂತ, ಅಪರೂಪದರಾಜಕಾರಣಿ ಶ್ರೀಯುತ ನಿಜಲಿಂಗಪ್ಪ ನವರು ಮುಖ್ಯಮಂತ್ರಿಯಾಗಿದ್ದು ಸಾರ್ವಜನಿಕ ಜೀವನದ ಸ್ವಚ್ಛತೆಯುನ್ನು ಕಾಪಾಡಿಕೊಂಡು ಬಂದವರು. ಮಹಾತ್ಮಾಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಸರಳಜೀವನವನ್ನು ನಡೆಸಿದವರು. ಅಧಿಕಾರಕ್ಕೆ ಆಸೆಪಟ್ಟವರಲ್ಲ. ಕೇಂದ್ರ ಸರ್ಕಾರದ ಮಂತ್ರಿ ಪದವಿ ಹಾಗೂ ರಾಷ್ಟ್ರಪತಿ ಪದವಿ ಕೈಬೀಸಿ ಕರೆದರೂ ತಾವುನಂಬಿದ್ದ ತತ್ವಗಳಿಂಗಾಗಿ ಆ ಪದವಿಗಳನ್ನು ಒಪ್ಪಿಕೊಳ್ಳಲಿಲ್ಲ.

ರಾಷ್ಟನಾಯಕ ನಿಜಲಿಂಗಪ್ಪನವರು ರಾಷ್ಟ್ರ ಜೀವನದ ಉತ್ತುಂಗಶಿಖರಕ್ಕೆ ಏರುವಲ್ಲಿ ಎಲೆ ಮರೆಯ ಕಾಯಿಯಾಗಿ ಮಹತ್ವದ ಪಾತ್ರ ವಹಿಸಿದವರು ಅವರ ಧರ್ಮಪತ್ನಿ ಶ್ರೀಮತಿ ಮುರಿಗೆಮ್ಮನವರು.

ಸ್ವಾತಂತ್ರಹೋರಾಟದ ಕಷ್ಟದ ದಿನಗಳಲ್ಲಿ ನಿಜಲಿಂಗಪ್ಪನವರ ವಕೀಲಿ ಸನ್ನದ್ದನ್ನು ಆಳುವ ಸರ್ಕಾರ ವಜಾಮಾಡಿಅವರನ್ನು ಜೈಲಿಗೆ ಕಳುಹಿಸಿದ ದಿನಗಳಲ್ಲಿ ಅಗತ್ಯವಾದ ಸ್ಫೂರ್ತಿಯನ್ನು ತುಂಬಿ ತುಂಬು ಸಂಸಾರವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತು "ನೀವು ಗಾಂಧಿ ಪರೀಕ್ಷೆಯನ್ನು ಕಟ್ಟಿದ್ದೀರಿ ಅದರಲ್ಲಿ ಯಶಸ್ವಿಯಾಗಿ ಬರಬೇಕು" ಎಂದು ಹುರಿದುಂಬಿಸಿ ರಾಷ್ಟ್ರ ಜೀವನದಲ್ಲಿ ಶ್ರೀಯುತ ನಿಜಲಿಂಗಪ್ಪನವರು ಮೇರು ಎತ್ತರಕ್ಕೆ ಏರುಲು ಸಹಕಾರಿಯಾದವರು.

ನಿಜಲಿಂಗಪ್ಪನವರ ಸರಳ ತ್ಯಾಗಮಯ ಜೀವನದ ಛಾಪು ಮಕ್ಕಳಲ್ಲಿ ಪ್ರತಿಬಿಂಬಿಸಿ ಎಲ್ಲರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವಲ್ಲಿ ಶ್ರೀಮತಿ ಮುರಿಗೆಮ್ಮನವರ ಶ್ರಮ ಅಪಾರ. ಬಡತನದಲ್ಲಿ ಕುಗ್ಗದೆ ಸಿರಿತನದಲ್ಲಿ ಹಿಗ್ಗದೆ, ನಿಜಲಿಂಗಪ್ಪನವರು ಎಂಟು ವರ್ಷಗಳ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗಲೂ ಹಣ, ಆಸ್ತಿ, ವಸ್ತ, ಒಡವೆ, ಅಧಿಕಾರಗಳಿಗೆ ಆಸೆಪಡದೇ ಯಜಮಾನರ ನಿಷ್ಠಾವಂತ ಜೀವನಕ್ಕೆ ಕುಂದು ಬಾರದಂತೆ ಸಂಸಾರ ನಡೆಸಿಕೊಂಡು ಬಂದ ಸಾಧ್ವಿ ಶ್ರೀಮತಿ ಮುರಿಗೆಮ್ಮನವರು ನಿಜಲಿಂಗಪ್ಪನವರು ಸತ್ಸಸಂಧರೂ, ನಿಸ್ವಾರ್ಥರೂ, ಸರಳ ಜೀವಿಗಳೂ ಆದರ್ಶಪ್ರಾಯರೂ ಆಗಿ ಜೀವನ ನಡೆಸಿದ್ದರೆ ಅದರ ಬಹುಪಾಲು ಯಶಸ್ಸು, ಮಾನಸಿಕಧೃಡತೆಯಿಂದ ತ್ಯಾಗಮಯ ಜೀವನನಡೆಸಿ ಸಂಸಾರದ ನೌಕೆಯನ್ನು ನಡೆಸಿದ ಶ್ರೀಮತಿ ಮುರಿಗೆಮ್ಮನವರಿಗೆ ಸಲ್ಲಬೇಕು.

ಶ್ರೀಮತಿ ಮುರಿಗೆಮ್ಮನವರಿಲ್ಲದಿದ್ದರೆ ನಿಜಲಿಂಗಪ್ಪನವರ ಮನೆಗತಿ ಏನಾಗುತ್ತಿತ್ತು ಅವರ ಸಾರ್ವಜನಿಕ ಮತ್ತು ರಾಜಕೀಯ ಜೀವನ ಏನಾಗಬಹುದಿತ್ತು ಇದನ್ನು ಊಹಿಸಲೂ ಕಷ್ಟ. ಮುರಿಗೆಮ್ಮನವರು ವಿದ್ಯಾವಂತರಲ್ಲ. ಮನೆಬಿಟ್ಟು ಹೊರಜಗತ್ತನ್ನು ನೋಡಿದ ಅನುಭವವೂ ಇರಲಿಲ್ಲ. ಆದರೂ ಕೊಟ್ಟಷ್ಟೇ ಹಣದಲ್ಲಿ ಸಂಸಾರತೂಗಿಸಿಕೊಂಡು ಹೋಗುವ ಕಲೆ, ಧೈರ್ಯ, ಬುದ್ಧಿವಂತಿಕೆ ಅವರಲ್ಲಿ ಇತ್ತು. ಗಂಡನ ಹೆಸರಿಗೆ ಮಸಿಬಳಿಯುವ ಯಾವ ಸಣ್ಣ ಯೋಚನೆಯೂ ಅವರಿಗೆ ಬರಲಿಲ್ಲ. ಎಲ್ಲ

ಮಕ್ಕಳನ್ನೂ ದೊಡ್ಡವರನ್ನು ಮಾಡಿದ್ದು ಅವರಲ್ಲಿ ಒಳ್ಳೆಯ ಗುಣಗಳನ್ನು ತುಂಬಿದ್ದು ತಾಯಿಯೇ.

ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪನವರ ವಸ್ತು ನಿಷ್ಟ ಜೀವನದ ಕಿರುಪರಿಚಯವನ್ನು ಅವರ ಮಡಿಲಲ್ಲಿ ಬೆಳೆದ ಮಗಳು ಶ್ರೀಮತಿ ಪಾರ್ವತಮ್ಮ ಮಹಲಿಂಗಶೆಟ್ಟರು ಬಹಳ ಸರಳವಾಗಿ ಚಿತ್ರಿಸಿದ್ದಾರೆ. ಈ ಪುಸ್ತಕದಲ್ಲಿ ಬರೆದಿರುವುದೆಲ್ಲ ಅವರೇ ನೋಡಿದ್ದು, ಅನುಭವಿಸಿದ್ದು. ಒಂದು ರೀತಿಯ ಸತ್ಯ ನಿಷ್ಠ ವರದಿ ಇದ್ದಂತೆ.

ನಾಡಿನ ಸೇವೆಯಲ್ಲಿ ಸಮಾಜವನ್ನು ತಿದ್ದುವಲ್ಲಿ ಶ್ರೀಮತಿ ಮುರಿಗೆಮ್ಮನವರ ಜೀವನ ಒಂದು ಆದರ್ಶ ಓದುಗರು ಅವರ ಜೀವನ ಪರಿಚಯ ದಿಂದ ಸ್ಫೂರ್ತಿ ಪಡೆಯುವಂತಾಗಲಿ ಎಂದು ಆಶಿಸೋಣ

ಈ ಪುಸ್ತಕವನ್ನು ಬರೆದು ಕೊಟ್ಟ ಶ್ರೀಮತಿ ಪಾರ್ವತಮ್ಮನವರಿಗೆ ಮತ್ತು ಪುಸ್ತಕ ಪ್ರಕಟಣೆಗೆ ನೆರವಾದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು.

**ಡಾ। ಜಸ್ಟೀಸ್ ವಿ.ಎಸ್. ಮಳಿಮಠ**

ಅಧ್ಯಕ್ಷರು

ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು

# ಮೊದಲ ಮಾತು

ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪಅವರ ಜೀವನ ಚರಿತ್ರೆಯನನು ಬರೆದು ಕೊಡಬೇಕೆಂದು ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪ ಕಲ್ಯಾಣ ಮಂಟಪ ಟ್ರಸ್ಟ್‌ನವರು ನನ್ನನ್ನು ಕೇಳಿದರು ನಾನು ಮುರಿಗಮ್ಮ ಮತ್ತು ನಿಜಲಿಂಗಪ್ಪನವರ ಮೊದಲನೆಯ ಮಗಳು, ನಮ್ಮ ತಾಯಿ ತೀರಿಕೊಂಡು 23ವರ್ಷಗಳಾಗಿವೆ. ಅಲ್ಲದೆ ಅವರ ಮದುವೆಗೆ ಮೊದಲ ಸುದ್ದಿ ನನಗೆ ಏನೂಗೊತ್ತಿಲ್ಲ, ನನ್ನಿಂದ ಈ ಕೆಲಸ ಸಾಧ್ಯವೇ ಎನ್ನುವ ಯೋಚನೆ ಮೊದಲನೆಯದು.

ಯೋಚಿಸಿದಂತೆಲ್ಲಾ ನಮಗೆ ಯಾರಿಗೂ ಈ ಮೊದಲು ಅವ್ವಯ್ಯನ ಜೀವನ ಚರಿತ್ರೆ ಬರೆಯುವ ಯೋಚನೆ ಏಕೆ ಬರಲಿಲ್ಲ ಎನಿಸಿತು. ತಿಳಿದಷ್ಟು ಬರೆದರಾಯಿತು ಎಂದು ಬರೆಯಲು ಶುರುಮಾಡಿದೆ. ಬರೆದಂತೆಲ್ಲಾ ನೆನಪಾಗುತ್ತಾ ಹೋಯಿತು. ನಾವು, ತಂದೆ ನಿಜಲಿಂಗಪ್ಪನವರ ತಾಯಿ ನೀಲಮ್ಮನನ್ನು ಅಮ್ಮ ಎಂತಲೂ, ತಂದೆಯನ್ನು ಅಪ್ಪಾ ಎಂತಲೂ, ತಾಯಿಯನ್ನು ಅವ್ವಯ್ಯ ಎಂತೂ ಕರೆಯುತ್ತೇವೆ.

ನನಗೀಗ 84 ವರ್ಷ. ಮರೆವು ಸಹಜ ಆದರೂ ನನಗೆ ನೆನಪಿದ್ದಷ್ಟು ಬರೆದಿದ್ದೇನೆ. ಡೆಲ್ಲಿಯಲ್ಲಿ ತಾಯಿಯ ಜೊತೆಗಿದ್ದ ತಂಗಿ ಪೂರ್ಣಿಮಾ ಅಲ್ಲಿಯ ವಿಷಯ ಬರೆದು ಕಳಿಸಿದ್ದಾಳೆ.

ನಮ್ಮ ತಂದೆಯ ಬಗ್ಗೆ 2–3 ಪುಸ್ತಕಗಳನ್ನು ಬರೆದಿದ್ದೇನೆ. ಅವರು ತಮ್ಮ ಜೀವನದಲ್ಲಿ ನಡೆದದ್ದನ್ನು ಆಗಾಗ ಹೇಳುತ್ತಲೇ ಇದ್ದರು. ನಮ್ಮ ಅಜ್ಜಿ ನೀಲಮ್ಮನೂ ನಾವು ಸಣ್ಣವರಿದ್ದಾಗ ಕಥೆ ಹೇಳಿದಂತೆ ಹೇಳುತ್ತಲೇ ಇದ್ದರು. ಆದರೆ ನಮ್ಮ ತಾಯಿಯ ಬಗ್ಗೆ ಏನನ್ನೂ ಯಾರೂ ಹೇಳಿಲ್ಲ. ಸುಖ ಇರಲಿ, ದುಃಖ ಇರಲಿ ತಾಯಿಯವರೂ ಸಹ ಯಾರ ಹತ್ತಿರವೂ ಹೇಳಿಕೊಳ್ಳುತ್ತಿರಲಿಲ್ಲ. ಹಾಗಾಗಿ ತಾಯಿಯ ಬಗ್ಗೆ ಬರೆಯುವುದು ಕಷ್ಟವೆ. ನಾವೇ ನೋಡಿದ್ದನ್ನು – ಕೇಳಿದ್ದನ್ನು ಅನುಭವಿಸಿದ್ದನ್ನು ಅಷ್ಟೇ ಬರೆಯ ಬೇಕಾಗುತ್ತದೆ. ಬೇರೆ ಯಾರಿಗೂ ಅಷ್ಟು ಮೊದಲಿನದು ಗೊತ್ತಿಲ್ಲ. ಮೊದಲ ಸಲ ತಂದೆ ಜೈಲಿಗೆ ಹೋದಾಗ ನನಗೆ ಹನ್ನೊಂದು ವರ್ಷ. ತಮ್ಮ ತಂಗಿಯರು ಇನ್ನೂ ಸಣ್ಣವರು ಅವರಿಗೆ ವಕೀಲಿ ಮಾಡುವಾಗಿನದು, ಜೈಲಿಗೆ ಹೋದಾಗಿನದು ಹೆಚ್ಚು ಗೊತ್ತಿಲ್ಲ. ಕೇಳಿ ತಿಳಿಯಲು ಅಜ್ಜಿಯಾಗಲಿ, ಅಪ್ಪನಾಗಲೀ ಈಗ ಇಲ್ಲ. ತಂದೆ ನಿಜಲಿಂಗಪ್ಪನವರು ಮನೆಯಲ್ಲಿ ಇರುತ್ತಿರಲೇಇಲ್ಲ. ತಾಯಿ ಅನುಭವಿಸಿದ ಕಷ್ಟಗಳೂ ಅವರಿಗೆ ಗೊತ್ತಿಲ್ಲ. ತಾವು ಅನುಭವಿಸಿದ ಕಷ್ಟಗಳನ್ನು ಮಕ್ಕಳಾಗಲೀ ತಾಯಿಯಾಗಲೀ ಅವರ ಹತ್ತಿರ ಹೇಳುತ್ತಿರಲೇ ಇಲ್ಲ. ಏನೇ ಕಷ್ಟಗಳು ಬಂದರೂ ಧೈರ್ಯದಿಂದ ಎದುರಿಸುತ್ತಿದ್ದರು; ಸುಮ್ಮನೆ ಅನುಭವಿಸುತ್ತಿದ್ದರು.

ಮುರಿಗೆಮ್ಮನವರೇನು ವಿದ್ಯಾವಂತರಲ್ಲ. ಮನೆಬಿಟ್ಟು ಹೊರಜಗತ್ತನ್ನು ನೋಡಿದ ಅನುಭವವೂ ಇರಲಿಲ್ಲ. ಆದರೂ ಕೊಟ್ಟಷ್ಟೇ ಹಣದಲ್ಲಿ ಸಂಸಾರ ತೂಗಿಸಿಕೊಂಡು ಹೋಗುವ ಕಲೆ, ಧೈರ್ಯ, ಬುದ್ಧಿವಂತಿಕೆ ಅವರಲ್ಲಿತ್ತು. ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮ ಎನ್ನುವ ಸಮುದ್ರದಲ್ಲಿ ನಮ್ಮ ಮನೆಯ ತ್ಯಾಗ ಒಂದು ಹನಿ ಎನ್ನಬಹುದು. ನಮಗೆ ಇರಲು ಸ್ವಂತ ಮನೆಯಾದರೂ ಇತ್ತು. ನಂತರ ಅಧಿಕಾರ ಬಂದಿತು. ಬೇಕೆಂದಿದ್ದರೆ ಮುರಿಗೆಮ್ಮನವರು ಸಾಕಷ್ಟು ಹಣ ಮಾಡಿಕೊಳ್ಳಬಹುದಿತ್ತು. ಆ ರೀತಿಯ ಅನ್ಯಾಯದ ಹಣ ಅವರಿಗೆ ಬೇಕಿರಲಿಲ್ಲ. ಗಂಡನ ಹೆಸರಿಗೆ ಮಸಿ ಬಳಿಯುವ ಯಾವ ಸಣ್ಣ ಯೋಚನೆಯೂ ಅವರಿಗೆ ಬರಲಿಲ್ಲ; ಮಕ್ಕಳಿಗೂ ಅಷ್ಟೆ. ಎಲ್ಲಾ ಮಕ್ಕಳನ್ನೂ ದೊಡ್ಡವರನ್ನಾಗಿ ಮಾಡಿದ್ದು, ಅವರಲ್ಲಿ ಒಳ್ಳೆಯ ಗುಣಗಳನ್ನು ತುಂಬಿದ್ದು

ತಾಯಿಯೇ. ತಂದೆ ತಮ್ಮ ಮಕ್ಕಳಿಗೆ ಏನೂ ಹೇಳುತ್ತಿರಲಿಲ್ಲ. ತಂದೆಯನ್ನು ನೋಡಿಯೇ ಮಕ್ಕಳು ಕಲಿಯಬೇಕಿತ್ತು. ಅಜ್ಜಿ ನೀಲಮ್ಮನ ಪ್ರಭಾವ ಮಕ್ಕಳಮೇಲೂ ಬೀರಿತ್ತು.

ನಮ್ಮ ತಂದೆ ನಿಜಲಿಂಗಪ್ಪನವರ ಜೀವನ ಚರಿತ್ರೆಯನ್ನು ಬರೆದಂತೆ ಯಾವುದೇ ಉತ್ಪ್ರೇಕ್ಷೆ ಮಾಡದೆ, ಬದಲಾವಣೆ ಮಾಡದೆ; ಇದ್ದುದನ್ನು ಇದ್ದಹಾಗೆ ವಸ್ತುನಿಷ್ಠೆಯಿಂದ ಬರೆಯಲು ಪ್ರಯತ್ನಿಸಿದ್ದೇನೆ.

ತಾಯಿ ಮುರಿಗೆಮ್ಮನವರ ಈ ಜೀವನ ಚರಿತ್ರೆ ಓದಿ, ಚಳವಳಿ ಮಾಡಿ ಜೈಲಿಗೆ ಹೋದವರಷ್ಟೇ ತ್ಯಾಗಮಾಡಿಲ್ಲ. ಅವರ ಮನೆಯವರೆಲ್ಲಾ, ಮುಖ್ಯವಾಗಿ ಹೆಂಗಸರು ಮಕ್ಕಳು ಎಷ್ಟು ತ್ಯಾಗ ಮಾಡಿದ್ದಾರೆಂದು ಈಗಿನ ಜನತೆಗೆ ಅರ್ಥವಾಗಬಹುದು ಎನ್ನುವ ಅಪೇಕ್ಷೆ ನನಗಿದೆ.

ಈ ಪುಸ್ತಕದ ಎರಡೆಯ ಮುದ್ರಣ ಪ್ರಕಟಿಸಲು, ಶ್ರೀ ಎಸ್. ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು ಇವರು ಮುಂದೆ ಬಂದಿರುವುದು, ನನಗೆ ಬಹಳ ಸಂತೋಷವಾಗಿದೆ, ಅದಕ್ಕೆ ಸಂಬಂಧ ಪಟ್ಟವರಿಗೂ ನನ್ನ ಕೃತಜ್ಞತಾ ಪೂರ್ವಕ ಧನ್ಯವಾದಗಳು.

0836-2350306
9448281705

ಪಾರ್ವತಮ್ಮ ಮಹಲಿಂಗಶೆಟ್ಟಿ
35. ಕೆ.ಎಚ್.ಬಿ. ಕಾಲೋನಿ,
ವಿಶ್ವೇಶ್ವರನಗರ, ಹುಬ್ಬಳ್ಳಿ-580032.

ಸೊಸೆ ವಿಮಲಾ, ಲೇಖಕಿ ಪಾರ್ವತಮ್ಮ, ಪತಿ ಮಹಲಿಂಗ ಶೆಟ್ಟಿ, ಮಗ ಚಂದ್ರಕಾಂತ್ ತಂದೆ ನಿಜಲಿಂಗಪ್ಪನವರೊಂದಿಗೆ

ನಿಜಲಿಂಗಪ್ಪನವರ 60ನೇ ಹುಟ್ಟುಹಬ್ಬ – 1962

## ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪನವರು

ಆ ದಿನ 1939ರ ಸೆಪ್ಟೆಂಬರ್ 29 ಬೆಳಗಿನ ಝಾವ 4–5 ಗಂಟೆ ಇರಬಹುದು. ಪೊಲೀಸ್ ವಾಹನ ಮನೆಯ ಮುಂದೆ ನಿಂತಿತ್ತು. ಎಸ್. ನಿಜಲಿಂಗಪ್ಪನವರನ್ನು ಅರೆಸ್ಟ್ ಮಾಡಲು ಪೊಲೀಸರು ಬಂದಿದ್ದರು. ಹಗಲು ಮಾಡಿದರೆ ಗಲಾಟೆ ಆಗಬಹುದೆಂದು ಆಗ ಬಂದಿದ್ದರು. ನಿಜಲಿಂಗಪ್ಪನವರು ಪತ್ನಿ ಮುರಿಗೆಮ್ಮನನ್ನು ಮೊದಲೇ ಕೇಳಿದ್ದರು, ನನ್ನನ್ನು ಯಾವಾಗ ಬೇಕಾದರೂ ಅರೆಸ್ಟ್ ಮಾಡಬಹುದು. ಏನು ಮಾಡಲಿ ಎಂದು. ನೀವು ಗಾಂಧೀ ಪರೀಕ್ಷೆ ಕಟ್ಟಿದ್ದೀರಿ ಪಾಸಾಗಲೇ ಬೇಕು. ಮುಂದಿಟ್ಟ ಹೆಜ್ಜೆ ಹಿಂದೆ ಇಡುವಂತಿಲ್ಲ ಎಂದು ಮುರಿಗೆಮ್ಮನವರು ಹೇಳಿದ ವಿಷಯ ಅನೇಕ

ಸಲ ಓದಿದ್ದೀರಿ. ಕೇಳಿದ್ದೀರಿ ಈಗ ಅದೇ ಸಂದರ್ಭ ಬಂದಿದೆ. ನಿಜಲಿಂಗಪ್ಪನವರ ತಾಯಿ ನೀಲಮ್ಮ, ಪತ್ನಿ ಮುರಿಗಮ್ಮ ಮತ್ತು ಮಕ್ಕಳೆಲ್ಲಾ ಎದ್ದಿದ್ದಾರೆ. ಮಕ್ಕಳು ಆಫೀಸಿನಲ್ಲಿ ಹಣಕಿದಾಗ, ಪಕ್ಕದ ಮನೆಯಲ್ಲಿರುವ ಲಾಯರುಗಳು ಕೇಶವಮೂರ್ತಿ ರಾಯರು, ಇಮಾಂ ಸಾಹೇಬರು. ನಿಜಲಿಂಗಪ್ಪನವರ ಎದುರಿಗೆ ಕುಳಿತು ಮಾತಾಡುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ನಿಜಲಿಂಗಪ್ಪನವರು ಹೊರಗೆ ಬಂದರು. ಅಲ್ಲೇ ನಿಂತಿದ್ದ ಮಕ್ಕಳಿಗೆ, ಮಕ್ಕಳೇ, ನಾನು ಈಗ ಜೈಲಿಗೆ ಹೊರಟಿದ್ದೇನೆ. ಯಾವತ್ತು ವಾಪಸ್ಸು ಬರುತ್ತೇನೋ ಗೊತ್ತಿಲ್ಲ. ನೀವು ಮನೆಯನ್ನು ನಿಮ್ಮ ತಾಯಿಯನ್ನು ಅಜ್ಜಿಯನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿ ಮುಂದಿದ್ದ ಪೊಲೀಸ್‌ವಾಹನದಲ್ಲಿ ಕುಳಿತರು.

ವಾಹನ ಹೊರಡುತ್ತಿದ್ದಂತೆ ದೊಡ್ಡ ಮಕ್ಕಳೆಲ್ಲಾ ವಂದೇ ಮಾತರಂ, ಬೋಲೋ ಭಾರತ ಮಾತಾ ಕೀ ಜೈ ಎಂದು ಕೂಗಿದರು. ಅದನ್ನು ಕೇಳಿ ನಿಜಲಿಂಗಪ್ಪ ಅವರಿಗೆ ಹೆಮ್ಮೆ ಆಗಿರಬೇಕು. ಮಕ್ಕಳು ಒಳಗೆ ಬಂದರೆ, ಮುರಿಗೆಮ್ಮನವರು ಒಂದು ಕಡೆ ನೀಲಮ್ಮ ಒಂದು ಕಡೆ ಕಣ್ಣೀರು ಹಾಕುತ್ತಿದ್ದಾರೆ. ಹೆಮ್ಮೆ ಪಡುವ ಸಂದರ್ಭದಲ್ಲಿ ಕಣ್ಣೀರೇಕೆ ಎಂದು ಮಕ್ಕಳಿಗೆ ತಳಮಳ, ಕಸಿವಿಸಿ. ಹನ್ನೊಂದು ವರ್ಷದಿಂದ ಒಂಬತ್ತು ತಿಂಗಳಿನವರೆಗಿನ ಏನೂ ಅರಿಯದ ಮುಗ್ಧ ಮಕ್ಕಳು. ಆಗ ನಿಜಲಿಂಗಪ್ಪನವರಿಗೆ 37 ವರ್ಷ ಮುರಿಗೆಮ್ಮನವರಿಗೆ 29 ವರ್ಷ. ನೀಲಮ್ಮನವರಿಗೆ 60 ವರ್ಷಕ್ಕೂ ಹೆಚ್ಚು.

ಮುರಿಗೆಮ್ಮ ನಿಜಲಿಂಗಪ್ಪನವರ
ಲಗ್ನದಲ್ಲಿ – 1927

ಕೋರ್ಟಿನಲ್ಲಿ ವಿಚಾರಣೆಯಾಗಿ ಎರಡು ವರ್ಷ ಜೈಲು ಎಂದಾಯಿತು. ತೀರ್ಪು ಕೊಡುವ ದಿನ ಕೋರ್ಟಿನ ಮುಂದೆ ಜನಸಾಗರ. ನೂರಾರು ಜನರಿಗೆ ಶಿಕ್ಷೆ ಆಯಿತು. ರಸ್ತೆ ತುಂಬೆಲ್ಲಾ ತಮ್ಮ ಹೆಮ್ಮೆಯ ಸತ್ಯಾಗ್ರಹಿಗಳಿಗೆ ಹಾಕಲು ತಂದಿದ್ದ ಹೂವಿನ ಹಾರಗಳಿಂದ ಉದುರಿದ ಪಕಳೆಗಳ ಮಳೆಗರೆದಂತಿತ್ತು. ಮನೆಯ ಹತ್ತಿರವೇ ಕೋರ್ಟ್. ನಿಜಲಿಂಗಪ್ಪನವರನ್ನು ನೋಡಲು ಕೋರ್ಟಿನ ಹತ್ತಿರ ಹೋಗಿ ದೂರ ನಿಂತು ನೋಡುತ್ತಿದ್ದ ಹೆಂಡತಿ ತಾಯಿಯನ್ನು ನೋಡಿ, ನಿಜಲಿಂಗಪ್ಪನವರಿಗೆ ಇರಿಸುಮುರಿಸಾಯಿತಂತೆ. ಮುಂದೆ ಎರಡು ವಾರಗಳಾದರೂ ಎಲ್ಲಿದ್ದಾರೆಂದು ಸುದ್ದಿ ಇಲ್ಲ. ದಿನಕ್ಕೊಂದು ವಿಚಿತ್ರ ಸುದ್ದಿಗಳು.. ಕಣ್ಣುಕಟ್ಟಿ ಕಾಡಿಗೆ ಬಿಟ್ಟಿದ್ದಾರಂತೆ, ಕಲ್ಲು ಒಡೆಸಿ, ರಸ್ತೆ ಮಾಡಲು ಹಚ್ಚಿದ್ದಾರಂತೆ, ದಿನಾ 25 ಸೇರು ರಾಗಿ ಬೀಸಬೇಕಂತೆ–ಕೇಳಿ ನಿಜಲಿಂಗಪ್ಪನವರ ತಾಯಿ ಹೆಂಡತಿ ಎಷ್ಟು ಸಂಕಟ ಪಟ್ಟರೋ.

ಸತ್ಯಾಗಹ್ರಹಿಗಳಾಗಿ ಜೈಲಿಗೆ ಹೋದ ಸಾವಿರಾರು ಜನರ ಮನೆಯವರೂ ಅಷ್ಟೇ ಸಂಕಟಪಟ್ಟಿದ್ದರು. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದಾರೆಂದು ಕಾಗದ ಬಂದ ಮೇಲೆ ಸಮಾಧಾನವಾಯಿತು. 14–15 ತಿಂಗಳಾದ ಮೇಲೆ ಎಲ್ಲರ ಬಿಡುಗಡೆ ಆಯಿತು.

ಮತ್ತೆ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರ ಮಾಡು ಅಥವಾ ಮಡಿ ಕರೆಗೆ ಓ ಗೊಟ್ಟು, ಚಳವಳಿ ಪ್ರಾರಂಭವಾಯಿತು. ಬೊಂಬಾಯಿ ಕಾಂಗ್ರೆಸ್ ಅಧಿವೇಶನಕ್ಕೆ ಹೋದವರೆಲ್ಲರ ಬಂಧನವಾಯಿತು. ನಿಜಲಿಂಗಪ್ಪನವರನ್ನು 1942ನೇ ಆಗಸ್ಟ್ 9ನೆಯ ತಾರೀಕು ಬೊಂಬಾಯಿಂದ ರೈಲಿನಲ್ಲಿ ಬರುವಾಗ ಯಶವಂತಪುರ ರೈಲ್ವೆ ಸ್ಟೇಷನ್ನಿನಲ್ಲಿ ಬಂಧಿಸಿ ಮತ್ತೆ ಎರಡು ವರ್ಷ ಶಿಕ್ಷೆವಿಧಿಸಿದರು. ಮುರಿಗೆಮ್ಮನವರು ಇನ್ನೂ ಮೊದಲಸಲದ ಒಂಟಿತನದ ಅನುಭವದಿಂದ ಹೊರಗೆ ಬಂದಿರಲಿಲ್ಲ.

ನಿಜಲಿಂಗಪ್ಪನವರು ಮನೆಯನ್ನೂ ಸೇರಿರಲಿಲ್ಲ. ಬೆಂಗಳೂರು ಸೆಂಟ್ರಲ್ ಜೈಲು, ಹಾಸನ ಜೈಲು ಮತ್ತು ಕೋಲಾರದ ಕೆ.ಜಿ.ಎಫ್. ಜೈಲುಗಳಲ್ಲಿ ಇಟ್ಟಿದ್ದರು. ಹೆಂಡತಿ ಮಕ್ಕಳು ತಾಯಿ, 5–6 ತಿಂಗಳಿಗೊಮ್ಮೆ ಹೋಗಿ 2–3 ದಿನ ಆ ಊರುಗಳಲ್ಲಿದ್ದು ಬೆಳಿಗ್ಗೆ ಮತ್ತು ಸಂಜೆ ನಿಜಲಿಂಗಪ್ಪನವರನ್ನು ಜೈಲ್‌ನಲ್ಲಿ ಸಂದರ್ಶನ ಮಾಡಿ ಬರುತ್ತಿದ್ದರು. ಎಲ್ಲರಿಗೂ ರೈಲು ಬಸ್ಸುಗಳಲ್ಲಿ ಹೋಗಿ ಬರಲು ಒಂದು ನೂರು ರೂಪಾಯಿಗಳಿಗಿಂತ ಹೆಚ್ಚು ಹಣ ಬೇಕಾಗುತ್ತಿತ್ತು. ಹಣದ ತೊಂದರೆ ಹೇಳ ತೀರದು. ದುಡಿಯುವವರಿಲ್ಲ, ದುಡಿದಿಟ್ಟ ಹಣವೂ ಇಲ್ಲ, ಯುದ್ಧಕಾಲವಾದ್ದರಿಂದ ಎಲ್ಲಾ ಬೆಲೆಗಳೂ ಏರುತ್ತಿದ್ದವು.

ಹಣ ಸಂಪಾದನೆ ಇಲ್ಲದೆ, ಮಕ್ಕಳನ್ನು ಸಾಕಲು ಮುರಿಗೆಮ್ಮನವರು ಪಟ್ಟಕಷ್ಟ ಅಷ್ಟಿಷ್ಟಲ್ಲ. ಮಕ್ಕಳಿಗೆ ಹೊಟ್ಟೆ ತುಂಬಾ ಊಟಕ್ಕೂ ಹಾಕಲಾರದಂತಹ ಪರಿಸ್ಥಿತಿ, ಒಂದೆರಡು ಆಣೆ ಉಳಿಸಲು ಅವರು ಪಡುತ್ತಿದ್ದ ಕಷ್ಟ ಹೇಳತೀರದು. ಆದರೆ ಅವರು ತಮ್ಮ ಸಂಕಷ್ಟಗಳನ್ನೂ ಯಾರ ಹತ್ತಿರವೂ ಒಂದು ಸಲವೂ ಹೇಳಿಕೊಂಡವರಲ್ಲ. ಮಕ್ಕಳಿಗೆ ಏನೂ ತಿಳಿಯು

ಕೈ ತೋಟದಲ್ಲಿ

ತ್ತಿರಲಿಲ್ಲ. ಅವರೆಲ್ಲಾ ಇನ್ನೂ ಸಣ್ಣ ಕ್ಲಾಸಿನಲ್ಲಿ ಓದುತ್ತಿದ್ದುದರಿಂದ ವಿದ್ಯಾಭ್ಯಾಸದ ಖರ್ಚು ಬಹಳ ಇರಲಿಲ್ಲ. ಮುರಿಗೆಮ್ಮನವರ ತೂಕ 20–25 ಪೌಂಡು ಕಡಿಮೆಯಾಗಿತ್ತೆಂದರೆ ಅವರ ಮಾನಸಿಕ ಯಾತನೆಗೆ ಅದೊಂದೇ ಉದಾಹರಣೆ ಸಾಕು.

ನಿಜಲಿಂಗಪ್ಪನವರು ಜೈಲಿಗೆ ಹೋಗಿದ್ದರಿಂದ ಪ್ರಯೋಜನಗಳೂ ಆದವು. ಮುರಿಗೆಮ್ಮ, ನೀಲಮ್ಮ, ಮಕ್ಕಳು–ಇಲ್ಲಿಯವರೆಗೆ ಚಿತ್ರದುರ್ಗ ದಾವಣಗೆರೆ ಗಳನ್ನು ಬಿಟ್ಟು ಬೇರೆ ಯಾವ ಊರಿಗೂ ಹೋಗಿ ರಲಿಲ್ಲ. ಆಗ ಜೈಲುಗಳ ಲ್ಲಿಟ್ಟಿದ್ದ ಊರುಗಳಾದ ಬೆಂಗಳೂರು, ಹಾಸನ, ಕೋಲಾರದ ಕೆ.ಜಿ.ಎಫ್ ಗಳಿಗೆ ಹೋಗಿ ಆ ಊರುಗಳನ್ನು ನೋಡಿ ದರು. ಹಾಸನಕ್ಕೆ ಹೋದಾಗ ಶ್ರವಣ ಬೆಳಗೊಳದ ಗೊಮ್ಮ ಟೇಶ್ವರ, ಹಳೇಬೀಡು, ಬೇಲೂರುಗಳ ದೇವಸ್ಥಾನಗಳನ್ನು ಕಲ್ಲಿನ ಕೆತ್ತನೆಗಳನ್ನು ನೋಡಲು ಸಾಧ್ಯವಾಯಿತು. ಬೆಂಗಳೂರಿನ ದೊಡ್ಡ ದೊಡ್ಡ ಕಟ್ಟಡಗಳನ್ನೂ ನೋಡುವಂತಾಯಿತು.

ಈ ಕಷ್ಟದ ಆರ್ಥಿಕ ಪರಿಸ್ಥಿತಿ ನಿಜಲಿಂಗಪ್ಪನವರು ಜೈಲಿನಿಂದ ಬಿಡುಗಡೆಯಾದ ಮೇಲೂ ಸುಧಾರಿಸಲಿಲ್ಲ. ನಿಜಲಿಂಗಪ್ಪನವರ ವಕೀಲಿ ಸನ್ನದನ್ನು 1940ರಲ್ಲಿ ಸರ್ಕಾರ ತೆಗೆದು ಹಾಕಿತ್ತು. ವಕೀಲಿ ಮಾಡುವಂತಿಲ್ಲ ಬೇರೆ ಉತ್ಪನ್ನವೂ ಇರಲಿಲ್ಲ. ದುಡಿದಿಟ್ಟ ಹಣವೂ ಅಷ್ಟಕಷ್ಟೆ.

1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ, ಅವರು ಘಟನಾ ಸಮಿತಿ ಸದಸ್ಯರಾಗಿದ್ದರು. ನಂತರ ಪಾರ್ಲಿಮೆಂಟ್ ಸದಸ್ಯರಾಗಿ ಆಯ್ಕೆಯಾದರು. ಆಗ ಅವರಿಗೆ ತಿಂಗಳಿಗೆ 400 ರೂಪಾಯಿ ಪಗಾರ ಸಿಗುತ್ತಿತ್ತು. ಸಭೆ ನಡೆದಾಗ ದಿನ ಬತ್ತೆ 20 ರೂಪಾಯಿ ಸಿಗುತ್ತಿತ್ತು. ಹಾಗೂ ಹೀಗೂ ಸಂಸಾರ ನಡೆಸಲು ಸಾಧ್ಯವಾಯಿತು. ಸಂಸಾರ ದೊಡ್ಡದಾಗಿತ್ತು. ಪಾರ್ವತಿ ಉಮಾಕಾಂತ, ರಾಜಶೇಖರ, ಅನಸೂಯ, ಗೌರಮ್ಮ, ಗಿರಿಜಾ, ಪ್ರತಿಭಾ, ಕಿರಣಶಂಕರ ಮತ್ತು ಪೂರ್ಣಿಮಾ ಎನ್ನುವ 9 ಮಕ್ಕಳು 1928 ರಿಂದ 1947 ರವರೆಗೆ ಹುಟ್ಟಿದ್ದರು.

ಮುರಿಗೆಮ್ಮನವರ ಪೂರ್ವಜರು ಮತ್ತು ಲಗ್ನ :-

ನಿಜಲಿಂಗಪ್ಪನವರ ಪತ್ನಿ ಮುರಿಗೆಮ್ಮ. ಚಿತ್ರದುರ್ಗದ ಶ್ರೀ ಮುರಗಿಸ್ವಾಮಿ ಮಠದ ಸ್ವಾಮಿಗಳವರ ಹೆಸರನ್ನು ಚಿತ್ರದುರ್ಗ ದಾವಣಗೆರೆಯ ಕಡೆ ಬಹಳ ಜನರು ಮಕ್ಕಳಿಗೆ ಇಟ್ಟಿರುತ್ತಾರೆ ಮುರಿಗಮ್ಮನವರ ತೌರುಮನೆ ದಾವಣಗೆರೆ, ಬೆಳ್ಳುಳ್ಳಿ ಮನೆತನ. ಆ ಭಾಗದಲ್ಲಿ ಅವರ ಅಜ್ಜ ಬೆಳ್ಳುಳ್ಳಿ ಮುರಿಗಪ್ಪ ಪ್ರಸಿದ್ಧರಾಗಿರಬೇಕು. ಆ ಗಲ್ಲಿಗೆ ಬೆಳ್ಳುಳ್ಳಿ ಮುರಿಗಪ್ಪನ ಗಲ್ಲಿ ಎಂದು ಹೆಸರಿದ್ದು, ಈಗ ಬಿ.ಎಮ್. ಗಲ್ಲಿ ಎಂದಾಗಿದೆ.

ಮುರಿಗೆಮ್ಮನವರು ಸಣ್ಣವರಿರುವಾಗಲೇ ತಂದೆಯನ್ನು ಕಳೆದುಕೊಂಡಿದ್ದರು. ಅವರ ಹೆಸರು ಚನ್ನಬಸಪ್ಪ, ತಾಯಿ ಚನ್ನಬಸಮ್ಮ ಚಂದ್ರಮ್ಮ ಎನ್ನುತ್ತಿದ್ದರು. ಅವರಿಗೆ ಇಬ್ಬರು ಗಂಡು 5 ಜನ ಹೆಣ್ಣು ಮಕ್ಕಳು ಗಂಡು ಮಕ್ಕಳು ಮುರಿಗಪ್ಪ, ಶಿವಪ್ಪ ಮುರಿಗೆಮ್ಮ 6ನೆಯವರು. ನಾಲ್ಕನೆಯ ತರಗತಿವರೆಗೆ ಓದಿದ್ದರು. ಓದುವ ರೂಢಿ ಇದ್ದರೂ ಬರೆಯುವ ಅಭ್ಯಾಸ ಇರಲಿಲ್ಲ. ಅವರದು ಮದ್ದಿನ ವ್ಯಾಪಾರ, ಸ್ವಂತ ಮನೆ ಇದ್ದಿತು. ಸಾಧಾರಣ ಮಧ್ಯಮವರ್ಗದವರು.

ಮುರಿಗೆಮ್ಮನವರ ಮದುವೆ ನಿಜಲಿಂಗಪ್ಪನವರೊಡನೆ 1927ನೇ ಮೆ 25ರಂದು ದಾವಣಗೆರೆಯಲ್ಲಿ ಆಯಿತು. ನಿಜಲಿಂಗಪ್ಪನವರದು ಹಲುವಾಗಲು, ತಂದೆ ಅಡಿವೆಪ್ಪ, ತಾಯಿ ನೀಲಮ್ಮ, ತಂದೆ ಅಡಿವೆಪ್ಪ ನಿಜಲಿಂಗಪ್ಪ ಸಣ್ಣವರಿದ್ದಾಗಲೇ ತೀರಿಕೊಂಡಿದ್ದರು. ನೀಲಮ್ಮನಿಗೆ ವರ್ಷಕ್ಕೊಂದರಂತೆ ಮೂರು ಮಕ್ಕಳು. ಪುಟ್ಟಮ್ಮ, ಬಸಪ್ಪ, ನಿಜಲಿಂಗಪ್ಪ ನೀಲಮ್ಮನ ತಂಗಿ ಸಾವಕ್ಕ. ಆಕೆಯ ಗಂಡ ದಾವಣಗೆರೆಯ ಸಿದ್ಧವ್ವನಹ ರುದ್ರಜ್ಜ. ರುದ್ರಜ್ಜನೇ ನಿಜಲಿಂಗಪ್ಪನವರಿಗೆ ಮದುವೆ ಮಾಡಬೇಕೆಂದು ಹೆಣ್ಣು ಹುಡುಕಿ ಮುರಿಗೆಮ್ಮನನ್ನು ಗೊತ್ತುಮಾಡಿದವರು.

ನಿಜಲಿಂಗಪ್ಪನವರು ಆರು ವರ್ಷದವರಿರುವಾಗಲೇ ಹಲುವಾಗಲಿನಿಂದ ದಾವಣಗೆರೆಗೆ ಬಂದು ಬಹಳ ಕಷ್ಟಪಟ್ಟು ಅವರಿವರ ಮನೆಯ

ಮುರಿಗೆಮ್ಮ ನಿಜಲಿಂಗಪ್ಪ 9 ಜನ ಮಕ್ಕಳೊಡನ

ಊಟಮಾಡಿಕೊಂಡು ವಿದ್ಯಾಭ್ಯಾಸ ಮಾಡಿ ಮುಲ್ಕಿ ಪರೀಕ್ಷೆ ಪಾಸಾದರು. ಸಿದ್ದವ್ವನಹಳ್ಳಿ ರುದ್ರಜ್ಜ ಸಹಾಯ ಮಾಡಿದರು. ಮುಂದೆ ಚಿತ್ರದುರ್ಗದಲ್ಲಿ ಸಾಹುಕಾರ ವೀರಭದ್ರಪ್ಪನವರ ಮನೆಯಲ್ಲಿದ್ದುಕೊಂಡು ಓದಿ ಮೆಟ್ರಿಕ್ ಪಾಸಾದರು. ಬೆಂಗಳೂರಿನಲ್ಲಿ ಇಂಟರ್ ಪಾಸುಮಾಡಿ, ಬಿ.ಎ. ಮಾಡಿಕೊಂಡರು. ಮತ್ತೆ ಪೂನಾಕ್ಕೆ ಹೋಗಿ ಎಲ್‌ಎಲ್.ಬಿ ಪಾಸುಮಾಡಿ ಲಾಯರಾದರು. ಇದಕ್ಕೆಲ್ಲಾ ಸಾಹುಕಾರ ವೀರಭದ್ರಪ್ಪನವರೂ ಅವರ ತಾಯಿ ವೀರಮ್ಮನೂ ಚಿತ್ರದುರ್ಗದ ಮಠದ ಆಗಿನ ಸ್ವಾಮಿಗಳಾದ ಶ್ರೀ ಜಯ ವಿಭವ ಸ್ವಾಮಿಗಳವರ ಸಹಾಯವೂ ಕಾರಣ. ಸಾಹುಕಾರರ ಮನೆಯಲ್ಲೇ ಇದ್ದುಕೊಂಡು ಅವರ ಸಹಾಯದಿಂದ 1914 ರಿಂದ 1926ರ ವರೆಗೆ ಮೆಟ್ರಿಕ್‌ನಿಂದ ಎಲ್‌ಎಲ್.ಬಿ. ವರೆಗೆ ಓದಿ ಲಾಯರಾದರು.

ಆಗ ಸಿದ್ದವ್ವನಹಳ್ಳಿ ರುದ್ರಜ್ಜನವರೇ ಕನ್ಯಾ ನೋಡಿ ನಿಶ್ಚಯಮಾಡಿದರು. ವರನ ಮನೆಯವರು ತರಬೇಕಾದ ಸೀರೆ ಮತ್ತು ಮಾಂಗಲ್ಯವನ್ನು ಸಹ ತಂದಿರಲಿಲ್ಲವಂತೆ. ವರ, ಆರೋಗ್ಯವಾಗಿ, ಲಕ್ಷಣವಾಗಿದ್ದರು. ಎಲ್‌ಎಲ್.ಬಿ. ಓದಿದ್ದರು, ಅಷ್ಟೇ ಮುರಿಗೆಮ್ಮ ನವರ ಅಕ್ಕಂದಿರನ್ನೆಲ್ಲಾ ಜಮೀನು ಬೆಳ್ಳಿ ಬಂಗಾರ ಇದ್ದ ಶ್ರೀಮಂತರಿಗೆ ಕೊಟ್ಟಿತ್ತು. ಏನೂ ಇಲ್ಲದ ಬಡವರಿಗೆ ಕೊಟ್ಟಿದ್ದಾರೆಂದು ಲಗ್ನದ ಹಿಂದಿನ ರಾತ್ರಿ ಮುರಿಗೆಮ್ಮ ಅಳುತ್ತಿದ್ದರಂತೆ. ಈ ವಿಷಯ ತಾಯಿ ನೀಲಮ್ಮ ಆಗಾಗ ಮೊಮ್ಮಕ್ಕಳ ಹತ್ತಿರ ಹೇಳುತ್ತಿದ್ದರು. ಮದುವೆಯಲ್ಲೇ ಮುರಿಗೆಮ್ಮನವರಿಗೆ ಅಡಿಯಿಂದ ಮುಡಿಯವರೆಗೆ ಬಂಗಾರ ಹಾಕಿದ್ದರೆಂದು ನಿಜಲಿಂಗಪ್ಪನವರು, ಮಕ್ಕಳ ಹತ್ತಿರ ಹೇಳಿ ನಗುತ್ತಿದ್ದರು. ಚಿತ್ರದುರ್ಗದಲ್ಲಿ ಸಾಹಕಾರ ವೀರಭದ್ರಪ್ಪನವರ ಮನೆಯಲ್ಲೇ ಮನೆ ತುಂಬಿಸಿಕೊಂಡರು.

1928ನೇ ಅಕ್ಟೋಬರ್‌ನಲ್ಲಿ ಮೊದಲನೆ ಮಗಳು ಹುಟ್ಟಿದಳು. ಆ ದಿನವೇ ನಿಜಲಿಂಗಪ್ಪನವರು ಹಂಪೆಗೆ ಹೋದವರು ದಾವಣಗೆರೆಗೆ ವಾಪಸ್ಸು ಬಂದಿದ್ದರು. ಅದಕ್ಕೇ ಪಾರ್ವತಿ ಎಂದು ಹೆಸರಿಟ್ಟರು. ಮಗುವಿಗೆ 5 ತಿಂಗಳಾದಾಗ ಚಿತ್ರದುರ್ಗದಲ್ಲಿ ಮನೆ ಮಾಡಿದರು. ಸಾಹುಕಾರ ವೀರಭದ್ರಪ್ಪನವರು ತಮ್ಮ ಸಂತೇ ಪೇಟೆಯ ಸಾಲು ಮನೆಗಳಲ್ಲಿ ಒಂದನ್ನು ವಾಸವಾಗಿರಲು ನಿಜಲಿಂಗಪ್ಪನವರಿಗೆ ಬಾಡಿಗೆ ಇಲ್ಲದೆ ಕೊಟ್ಟರು. ತಾಯಿ ನೀಲಮ್ಮನನ್ನು ಹಳ್ಳಿಯಿಂದ ಕರೆಸಿದರು. ಜೊತೆಗೆ ಅಕ್ಕನ ಮಗ ಬಸವರಾಜನೂ ಬಂದ. ಮನೆಯ ಮುಂದಿನಭಾಗವನ್ನೇ ಲಾಯರ್ ಆಫೀಸ್ ಮಾಡಿದರು. ಮನೆಯ ಅಕ್ಕ ಪಕ್ಕಗಳಲ್ಲಿ ಸಂಬಂಧಿಕರ ಮನೆಗಳಿದ್ದವು. ಎಲ್ಲಾ ಲಿಂಗಾಯಿತರ ಮನೆಗಳೇ.

ಮನೆಯ ಮುಂದೆ ನಡೆಯುತ್ತಿದ್ದ ಸಂತೆಯಲ್ಲಿ 9 ರೂಪಾಯಿಗೆ ಒಂದು ಹಸುವನ್ನು ಕೊಂಡಿದ್ದರು. ಅದು ಪ್ರತಿವರುಷಕ್ಕೊಮ್ಮೆ ಕರು ಹಾಕುತ್ತಿತ್ತು. ಮನೆಯಲ್ಲಿ ಮಕ್ಕಳಿಗೆ ಸಾಕಷ್ಟು ಹಾಲು ದೊರಕುತ್ತಿತ್ತು. ಆ ಮನೆಯಲ್ಲಿದ್ದಾಗ

ಸುತ್ತ ಮುತ್ತಲಿನ ಮನೆಯುವರೆಲ್ಲಾ ಸಂಬಂಧಿಕರು ಅಥವಾ ಸ್ನೇಹಿತರಾಗಿದ್ದರು.

ಹೆಂಗಸರು ಮಕ್ಕಳೆಲ್ಲಾ ಸೇರಿ, ತಿಂಗಳಿಗೊಮ್ಮೆ ಹೊರಗೆ ಊಟಕ್ಕೆ ಹೋಗುತ್ತಿದ್ದರು. ಚಿತ್ರದುರ್ಗದಲ್ಲಿ ಹೊರಸಂಚಾರ ಹೋಗಲು ಅನೇಕ ಜಾಗಗಳಿವೆ. ದವಳಪ್ಪನ ಗುಡ್ಡ, ಅಂಕಳಿಮಠ, ಒನಕೆ ಓಬವ್ವನ ಕಿಂಡಿ, ಮೇಲುಕೋಟೆ, ತಣ್ಣೀರ ದೋಣಿ ಮುಂತಾಗಿ ಅನೇಕ ಸ್ಥಳಗಳಿವೆ. ಎಲ್ಲಾ ಕಡೆ ಕುಡಿಯುವ ನೀರಿನ ಅನುಕೂಲವಿತ್ತು. ಒಂದು ದಿನ ಮಜಾವಾಗಿ ಒಟ್ಟಿಗೆ ಕಾಲ ಕಳೆದು ಬರುತ್ತಿದ್ದರು. ವೆಂಕಟೇಶಪುರ ಬಡಾವಣೆಯಲ್ಲಿ ಹೊಸಮನೆ ಕಟ್ಟಿಸಿದ ಮೇಲೆ ಇವೆಲ್ಲಾ ನಿಂತುಹೋದವು.

ನಿಜಲಿಂಗಪ್ಪನವರು ಲಾಯರಾಗಿ ಸ್ವಲ್ಪ ಕಾಲದಲ್ಲೇ ಒಳ್ಳೆಸಂಪಾದನೆ, ಹೆಸರನ್ನೂ ಗಳಿಸಿದರು. ಸ್ವತಃ ನಿಂತು, ಈಗಿರುವ ದೊಡ್ಡ ಬಂಗಲೆಯನ್ನು

ಕಟ್ಟಿಸಿದರು. ಏನೂ ಇಲ್ಲದವರನ್ನು ಮದುವೆ ಆಗಿದ್ದ ಮುರಿಗಮ್ಮನವರು, ಅಂತಸ್ತು ಅಧಿಕಾರ, ಬಂಗಾರ, ಮಕ್ಕಳು ಮನೆ ಎಲ್ಲವನ್ನೂ ಕಂಡರು. 15–20 ರುಪಾಯಿಗೆ ತೊಲ ಬಂಗಾರದ ಬೆಲೆ. ಸರ, ಬಳೆ, ಸೊಂಟದ ಪಟ್ಟಿ ಮುಂತಾದ ಒಡವೆಗಳನ್ನು ಮಾಡಿಸಿಕೊಂಡರು. ತಾಯಿ ನೀಲಮ್ಮನಿಗೂ ಮಾಡಿಸಿದರು. ಪ್ರತಿದಿನ ಮೊಳಕಾಲ್ಮೂರು ರೇಷ್ಮೆ ಸೀರೆ ಉಡುತ್ತಿದ್ದರು.

1935 ರಲ್ಲಿ ಮನೆ ಕಟ್ಟಿ ಮುಗಿಸಿದರು. ಅಷ್ಟರಲ್ಲಿ 5 ಜನ ಮಕ್ಕಳಾದರು. ಗೌರಯ್ಯ ಎನ್ನುವ ಅಡಿಗೆಯವನಿದ್ದ. ಅತ್ತೆ ನೀಲಮ್ಮ ಮತ್ತು ಮುರಿಗೆಮ್ಮ ಸೌಹಾರ್ದದಿಂದ ಹಂಚಿಕೊಂಡು ಕೆಲಸ ಮಾಡುತ್ತಿದ್ದರು. ಮುರಿಗೆಮ್ಮನವರಿಗೆ ಮೇಲೆ ಮೇಲೆ ಮಕ್ಕಳು. ಮಕ್ಕಳು ಸ್ವಲ್ಪ ದೊಡ್ಡವರಾದ ಕೂಡಲೇ, ಅಜ್ಜಿ ನೀಲಮ್ಮ ಸಾಕುತ್ತಿದ್ದರು. ಬಾಣಂತಿತನ ಮಾಡಲು ತಾಯಿ ಚಂದ್ರಮ್ಮ ದಾವಣಗೆರೆಯಿಂದ ಬಂದು ಐದಾರು ತಿಂಗಳು ಇರುತ್ತಿದ್ದರು. ಅದರಲ್ಲೇ ಬೇಸಿಗೆಯಲ್ಲಿ ಹಪ್ಪಳ, ಶ್ಯಾವಿಗೆ ನಾನಾ ತರದ ಸಂಡಿಗೆ ಮಾಡುತ್ತಿದ್ದರು. ಒಟ್ಟಿನಲ್ಲಿ ಬಿಡುವಿಲ್ಲದ ಕೆಲಸ.

ಆಗಿನ ಕಾಲದಲ್ಲಿ ಹಾಸ್ಟೆಲುಗಳು ಇರಲಿಲ್ಲ. ಹೈಸ್ಕೂಲಿಗೆ ಓದಲ ಹಳ್ಳಿಯಿಂದ ಬಡವರ ಮಕ್ಕಳು ಚಿತ್ರದುರ್ಗಕ್ಕೆ ಬರಬೇಕಿತ್ತು. ಪ್ರತಿದಿ ಒಂದೊಂದು ಮನೆಯಲ್ಲಿ ವಾರಕ್ಕೆ 7 ಮನೆಗಳಲ್ಲಿ ಊಟ ಮಾ ಓದುತ್ತಿದ್ದರು. ಇವರಿಗೆ ವಾರಾನ್ನದ ಹುಡುಗರು ಎನ್ನುತ್ತಿದ್ದರು. ತವ ಮನೆಯಲ್ಲಿನ ಕೆಲಸವೇ ಸಾಕಷ್ಟಿದ್ದರೂ ಗಂಡನ ಮಾತನ್ನು ಮೀರಲಾಗದ ಪ್ರತಿ ದಿನ ಇಂತಹ ಹುಡುಗರಿಗೆ ಹೊತ್ತಿಗೆ ಸರಿಯಾಗಿ ಊಟಕ್ಕೆ ಹಾ ಕಳಿಸುತ್ತಿದ್ದರು, ಮುರಿಗೆಮ್ಮನವರು.

ಹೊಸ ಮನೆಗೆ ಬಂದ ಮೇಲೆ ಮುರಿಗೆಮ್ಮನವರ ದೃಷ್ಟಿ ವಿಶಾ ವಾಯಿತು. ದಾವಣಗೆರೆಯಲ್ಲಿ ಮತ್ತು ಸಂತೇಪೇಟೆ ಮನೆಯಲ್ಲಿ ಎಲ್ಲರು ಲಿಂಗಾಯತರೇ ಇದ್ದರು. ಬೇರೆಯವರ ವಿಷಯಗಳೇ ಗೊತ್ತಿರಲಿಲ್ಲ. ಇ ಬಂದ ಮೇಲೆ ಅಕ್ಕಪಕ್ಕದ ಮನೆಗಳಲ್ಲಿ ಬೇರೆ ಬೇರೆ ಜಾತಿಯವರಿದ್ದರು.

ಒಂದು ಕಡೆ ಕೇಶವಮೂರ್ತಿರಾಯರೂ. ಒಂದು ಕಡೆ ಜಗಲೂ ಇಮಾಂ ಸಾಹೇಬರು ಇದ್ದರು. ಸ್ಕೂಲಿಗೆ ಹೋಗುವ ಮಕ್ಕಳೆಲ್ಲಾ ಒಟ್ಟಿ ಹೋಗುತ್ತಿದ್ದರು. ಒಬ್ಬರ ಮನೆಗೊಬ್ಬರು ಆಡಲು ಬರುತ್ತಿದ್ದರು.

ಮುರಿಗೆಮ್ಮನವರಿಗೆ ಕೇಶವ ಮೂರ್ತಿರಾಯರ ಪತ್ನಿ ಇಂದಿರಾಬಾ ಅವರದೂ, ಇಮಾಂ ಸಾಹೇಬರ ಪತ್ನಿಯದೂ ಸ್ನೇಹವಾಯಿತು. ಹತ್ತಿರ ಬಿ.ಟಿ. ಶಿವನ್ ಅವರ ಪತ್ನಿ ರಾಜಮ್ಮನವರದೂ, ಜಿ. ಚನ್ನಪ್ಪನವರ ಪ ಪಾರ್ವತಮ್ಮನರದೂ ಪರಿಚಯವಾಯಿತು. ಅವರು ಬೆಂಗಳೂರಿನವ ಅವರಿಂದ ಜಡೆಗೆ ಕೇದಿಗೆಯನ್ನಿಟ್ಟು, ಸೀಳುಜಡೆ, ಸರಪಳಿಜಡೆ, ಮೊಗ್ಗಿ ಸುಗ್ಗಿಯಲ್ಲಿ ಮೊಗ್ಗಿನ ಜಡೆ ಹಾಕುವುದನ್ನು ಕಲಿತರು.

ಎಲ್ಲಾ ವಕೀಲರ ಪತ್ನಿಯರೂ ಹೆಚ್ಚುಕಡಿಮೆ ಸಮವಯಸ್ಸಿನ ರಾಗಿದ್ದರು. ಮಹಿಳಾ ಸಮಾಜದ ಸದಸ್ಯೆಯರಾಗಿದ್ದರು. ಸಮಾಜದ ಕಟ್ಟ ಸಹ ಹತ್ತಿರವೇ ಇದ್ದಿತು. ಮೀಟಿಂಗಗಳು ಇದ್ದಾಗ ಸಾಯಂಕಾ ಮುರಿಗೆಮ್ಮನವರು ಸಮಾಜಕ್ಕೆ ಹೋಗುತ್ತಿದ್ದರು. ಅಲ್ಲಿ ಎಲ್ಲಾ ಜಾತಿಯವ ಸಂಪರ್ಕ ಬಂದು, ಸಹಬಾಳ್ವೆ ಸ್ವಾಭಾವಿಕವಾಯಿತು.

ಆಗ ಕಸೂತಿ ಕೆಲಸಗಳನ್ನು ಮಾಡಲು, ಬಟ್ಟೆ ಅದಕ್ಕೆ ಬೇಕಾದ ಸಾಮಾನುಗಳನ್ನೆಲ್ಲಾ ತಂದು ಮನೆಮನೆಗೆ ಮಾರುತ್ತಿದ್ದರು. ಹಾಕುವುದನ್ನು ಕಲಿಸುತ್ತಿದ್ದರು. ರಿಬ್ಬನ್ ವರ್ಕ್, ಷಿನಲ್ ವರ್ಕ್, ಕುಷನ್ ವರ್ಕ್ ಎಂದು ಮುರಿಗೆಮ್ಮನವರು ಹಾಕಿದ್ದರು. ಅವು ಈಗಲೂ 60 ವರ್ಷಗಳ ನಂತರವೂ, ಚಿತ್ರದುರ್ಗದ ಮನೆಯ ಗೋಡೆಗಳನ್ನು ಅಲಂಕರಿಸಿವೆ. ಮದುವೆಗೆ ಮೊದಲೂ ದಾವಣಗೆರೆಯಲ್ಲಿ ಮಾಡಿದ ಅನೇಕ ಕೈಕೆಲಸಗಳನ್ನು ನೋಡಿದ ನೆನಪು ದೊಡ್ಡ ಮಕ್ಕಳಿಗಿದೆ. ನೀಲಿ ಬಣ್ಣದ ಸಣ್ಣ ಮಣಿಗಳನ್ನು ತಂತಿಯಲ್ಲಿ ಪೋಣಿಸಿ 8–10 ಅಂಗುಲ ಉದ್ದ ಕಾರನ್ನು ಮಾಡಿದ್ದರು. ಗಾಲಿಗಳು, ಮುಂತಾದ ಎಲ್ಲಾ ಸಾಮಾನುಗಳು ಪ್ರಮಾಣ ಬದ್ಧವಾಗಿದ್ದವು. ಸಾಮಾನ್ಯ ಜನರು ಕಾರನ್ನು ನೋಡಿರದ ಕಾಲ ಅದು. ಹಸಿರು ಮಣಿಗಳಲ್ಲಿ 5–6 ಅಂಗುಲ ಉದ್ದದ ಗಿಣಿಯನ್ನು, ಅದನ್ನು ಹಿಡಿಸುವಂತರ 10–12 ಅಂಗುಲ ಉದ್ದಗಲದ ಪಂಜರವನ್ನು ಮಾಡಿದ್ದರು. ತುಂಬಾ ಲಕ್ಷಣವಾಗಿ ಪ್ರಮಾಣ ಬದ್ಧವಾಗಿದ್ದವು. ಮಕ್ಕಳು ಮಣಿ ಬೇಕೆಂದು ಅವನ್ನೆಲ್ಲಾ ಹಾಳು ಮಾಡಿದರು. ಮುರಿಗೆಮ್ಮನವರಿಗೆ ಎಷ್ಟು ಬೇಜಾರಾಗಿರಬೇಕೆಂದು ಮಕ್ಕಳು ಯಾರೂ ಯೋಚಿಸಲಿಲ್ಲ. ಆಗ ಬಾಟಲುಗಳು ಸಿಗುತ್ತಿದ್ದುದೇ ಅಪರೂಪ. ಚೌಕನೆಯ ಬಿಳಿ ಬಾಟಲುಗಳಲ್ಲಿ ಮಣಿ ತಂತಿಗಳಿಂದ ಬಣ್ಣ ಬಣ್ಣದ ಎಲೆ, ಬಳ್ಳಿ, ಹೂವುಗಳನ್ನು ಮಾಡಿ, ಅದರ ಸಣ್ಣ ಬಾಯೊಳಗೆ ತೂರಿಸಿ, ಒಳಗೆ ಚಂದಕಾಣುವಂತೆ ಮಾಡಿ, ಬಾಗಿಲುಗಳಿಗೆ ತಗಲಿ ಹಾಕುತ್ತಿದ್ದರು.

ಇಂಟು ಆಕಾರದ ಕ್ರಾಸ್ ಸ್ಟಿಚ್ ಹೊಲಿಗೆಯಲ್ಲಿ ರೊಟ್ಟಿನ ಮೇಲೆ ದೊಡ್ಡದೊಂದು ಸಿಂಹವನ್ನು ಬಣ್ಣದ ದಾರಗಳಿಂದ ಹಾಕಿದ್ದರು. ಅದು ಹುಳ ತಿಂದು ಹಾಳಾಯಿತು. ಈಗ ಮದುವೆಗೆ ಮುಂಚಿನ ಅವರ ಕಲಾ ಕುಶಲತೆಗೆ ಸಾಕ್ಷಿಯಾಗಿ ಉಳಿದಿರುವುದು ಒಂದೇ ಸಾಮಾನು ಗುಬ್ಬಿಚೆಟ್ಟು 2 ಅಡಿ ಚೌಕದ ಸಣ್ಣ ಮತ್ತು ದೊಡ್ಡ ಮಣಿ, ಬಟ್ಟೆಯಿಂದ ವಿವಿಧ ಆಕಾರಗಳಿಂದ, ತುಂಬಾ ಆಕರ್ಷಕವಾಗಿ ಕಾಣುವ, ತೊಟ್ಟಿಲ ಮೇಲೆ ತಗುಲು ಹಾಕುವ ಗುಬ್ಬಿಚೆಟ್ಟು ಅದು ಅನೇಕ ವರ್ಷ ಚಿತ್ರದುರ್ಗದ ಮನೆಯಲ್ಲಿ ತೂಗಾಡುತ್ತಿತ್ತು. ಈಗ ಅದು ಧರ್ಮಸ್ಥಳದ ಮ್ಯೂಸಿಯಂನಲ್ಲಿ ಇದೆ. ಅಲ್ಲಿಗೆ ಹೋದವರು ಅದನ್ನು ನೋಡಬಹುದು.

ನಿಜಲಿಂಗಪ್ಪನವರ ವಕೀಲಿ ಚೆನ್ನಾಗಿ ನಡೆಯ ತೊಡಗಿತು ಸಾಕಷ್ಟು ಕಕ್ಷಿಗಾರರು ಬರುತ್ತಿದ್ದರು. ಅದರಲ್ಲಿ ಹರಿಜನರೂ ಇದ್ದರು. ಅವರು ಜಮಖಾನ ಹಾಸಿದ ಆಫೀಸಿನಲ್ಲಿ ಕುಳಿತುಕೊಳ್ಳದೆ, ಹೊರಗೆ ವರಾಂಡಾದಲ್ಲಿ ಬರೀ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದರು. ಅವರನ್ನು ಒಳಗೆ ಬಂದು ಕುಳಿತುಕೊಳ್ಳುವಂತೆ ಮನಒಲಿಸಲು ಸಾಕಷ್ಟು ಒತ್ತಾಯ ಮಾಡಬೇಕಾಯಿತು. ಕಾಲವೂ ವ್ಯಯವಾಗುತ್ತಿತ್ತು. ನಂತರದ್ದು ಸಹಪಂಕ್ತಿ ಭೋಜನ ಒಟ್ಟಿಗೆ ಕುಳಿತು ಊಟಮಾಡಬೇಕೆಂದು ಬರೀ ಬಾಯಿಂದ ಹೇಳಿದರೆ ಸಾಲದು ಮಾಡಿ ತೋರಿಸಬೇಕೆನ್ನುವವರು ನಿಜಲಿಂಗಪ್ಪನವರು. ಹರಿಜನರನ್ನು ಒಪ್ಪಿಸುವಷ್ಟೇ ಕಷ್ಟ, ಮನೆಯಲ್ಲಿ ತಾಯಿ ಮತ್ತು ಹೆಂಡತಿಯನ್ನು ಒಪ್ಪಿಸುವಾಗಲೂ ಆಯಿತು. ಮೊದಲು ಹರಿಜನರು ಕುಳಿತ ಜಾಗ ಉಪಯೋಗಿಸಿದ ಸಾಮಾನುಗಳನ್ನು ಶೆಗಣಿ ಹಾಕಿ ತೊಳೆಯುತ್ತಿದ್ದರು ನಂತರ ವಂದೇ ಮಾತರಂ ಅಂದರಾಯಿತು, ಬಿಡಪ್ಪ.. ಈ ಗಾಂಧಿ ಯುಗದಲ್ಲಿ ಎಲ್ಲಾ ಶುದ್ಧವಾಗುತ್ತದೆ ಎನ್ನುತ್ತಿದ್ದರು, ಅತ್ತೆ ಸೊಸೆ. ಸಹ ಪಂಕ್ತಿ ಭೋಜನ ಬರೀ ಮಾತಿನಲ್ಲಿರದೆ, ಕೃತಿಯಲ್ಲಿರಬೇಕು ಎನ್ನುತ್ತಿದ್ದರು ನಿಜಲಿಂಗಪ್ಪ. ಇದು 1939ಕ್ಕೂ ಮೊದಲಿನ ಸುದ್ದಿ. ಮುರಿಗೆವ್ವ ಸಂಪ್ರದಾಯಸ್ಥ ಮನೆತನದಲ್ಲಿ ಬೆಳೆದು ಬಂದಿದ್ದರೂ ಗಂಡನ ಮಾತಿಗೆ ಬೆಲೆಕೊಟ್ಟು ಗೌರವಿಸಿ ಸಹಕರಿಸಿದರು.

ಸ್ವಂತ ಮನೆ, ಸಾಕಾಗುವಷ್ಟು ಸಂಪಾದನೆ, ಆರೋಗ್ಯವಂತರಾದ ಬುದ್ಧಿವಂತ, ಯೋಗ್ಯ ಮಕ್ಕಳು, ಹೊಂದಿಕೊಂಡು ಹೋಗುವ ಹೆಂಡತಿ ತಾಯಿ, ಊರಿನಲ್ಲಿ ಗೌರವ, ಮರ್ಯಾದೆ ಇನ್ನೇನು ಬೇಕು. 1939ರಲ್ಲಿ ಮೊದಲ ಸಲ ಜೈಲಿಗೆ ಹೋದರು. ಈಗ ಕಷ್ಟಗಳ ಪರಂಪರೆ ಶುರು ಆಯಿತು. ಹಿಂದಿನ ಮನೆ ಬಾಡಿಗೆ ತಿಂಗಳಿಗೆ 20ರೂಪಾಯಿ ಬರುತ್ತಿತ್ತು. ನಿಜಲಿಂಗಪ್ಪನವರ ವಕೀಲಿ ನೋಡಿಕೊಳ್ಳುತ್ತಿದ್ದವರು ವಾರಕ್ಕೆ 20ರೂಪಾಯಿ ಮನೆ ಖರ್ಚಿಗೆ ಕೊಡುತ್ತಿದ್ದರು. ಆ ನೂರು ರೂಪಾಯಿಗಳಲ್ಲೇ ಮನೆಯಲ್ಲಿ

ಹತ್ತು ಜನರ ಸಂಸಾರ ಒಂದು ತಿಂಗಳು ಸಾಗಬೇಕು. ಎರಡು ಹೊತ್ತು ಊಟಕ್ಕೂ ಸಾಕಾಗುತ್ತಿರಲಿಲ್ಲ. ಮಕ್ಕಳಿಗೆ ವರ್ಷಕ್ಕೆ ಎರಡೆರಡೇ ಬಟ್ಟೆ. ಚಪ್ಪಲಿ ಇಲ್ಲ. ಮುರಿಗೆಮ್ಮನವರು ಯಾರ ಹತ್ತಿರವೂ ತಮ್ಮ ಕಷ್ಟ-ಸುಖ ಹೇಳಿಕೊಳ್ಳುತ್ತಿರಲಿಲ್ಲ. ತಮ್ಮ ತಂದೆ ಜೈಲಿಗೆ ಹೋಗಿ ಏನೋ ಮಹತ್ವದ್ದು ಸಾಧಿಸುತ್ತಾರೆಂದು ಮಕ್ಕಳು ಹೆಮ್ಮೆಯಿಂದಲೇ ಅನುಭವಿಸುತ್ತಿದ್ದರು.

1947ನೇ ಆಗಸ್ಟ್ 15ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆಗ ನಿಜಲಿಂಗಪ್ಪನವರು ಘಟನಾ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಮೀಟಿಂಗ್ ಇದ್ದಾಗ ದೆಹಲಿಗೆ ಹೋಗಿ ಬರುತ್ತಿದ್ದರು. ಸ್ವಾತಂತ್ರೋತ್ಸವವನ್ನು ನೋಡಲು ಮುರಿಗೆಮ್ಮನವರು ಇಬ್ಬರು ಮಕ್ಕಳೊಡನೆ ನಿಜಲಿಂಗಪ್ಪನವರ ಜೊತೆ ದೆಹಲಿಗೆ ಹೋದರು. ಅಂತಹ ದೊಡ್ಡ ಊರನ್ನು ನೋಡಿದ್ದು ದೊಡ್ಡ ಸಮಾರಂಭದಲ್ಲಿ ಭಾಗಿ ಆದದ್ದು ಅದೇ ಮೊದಲು. ಅದರಿಂದ ಬಹಳ ಪ್ರಭಾವಿತರಾದರು.

ಆ ರಾತ್ರಿಯ ವಿಜೃಂಭಣೆ ವಿದ್ಯುತ್ ದ್ವೀಪಗಳ ಜಗಮಗ, ದೊಡ್ಡ ದೊಡ್ಡ ಕಾರುಗಳಲ್ಲಿ ಬರುವ ದೇಶವಿದೇಶಿಗಳ ಗಣ್ಯರನ್ನು ಸ್ವಾಗತಿಸುವಿಕೆ. ಮಧ್ಯರಾತ್ರಿಯ ಬ್ಯಾಂಡುಗಳ ಸಂಗೀತ, ಹರ್ಷಧ್ವನಿ ಮಾಡುವ ಜನಜಂಗುಳಿ ಇವನ್ನೆಲ್ಲಾ ನೋಡಿ, ಕೇಳಿ ಮುರಿಗೆಮ್ಮನವರಿಗೆ ದಂಗು ಬಡಿದಂತಾಯಿತು. ಎಲ್ಲಕ್ಕಿಂತ ಮಿಗಿಲಾಗಿ ಬ್ರಿಟಿಷರ ಬಾವುಟ ಇಳಿಸಿ. ನಮ್ಮ ಭಾರತದ ಸ್ವತಂತ್ರ್ಯ ಧ್ವಜ ಮೇಲೇರಿದಾಗಿನ ಜಯಧ್ವನಿ. ಪುಳಕ ಅವರ ಜೀವಮಾನದಲ್ಲಿ ಇಂತಹ ಸನ್ನಿವೇಶವನ್ನು ನೋಡಿರಲಿಲ್ಲ ಅನೇಕ ದಿನಗಳವರೆಗೆ ಅದನ್ನು ವರ್ಣಿಸುತ್ತಿದ್ದರು.

ಪತಿಯೊಂದಿಗೆ ಸಂತೋಷದ ಕ್ಷಣ

ನಿಜಲಿಂಗಪ್ಪನವರು ಮರುದಿನ ಪರಿಚಿತರೊಡನೆ

ಮುರಿಗಮ್ಮ ನವರನ್ನು ಕಾಶಿ ಹರಿದ್ವಾರ, ಋಷಿಕೇಶ ಮುಂತಾದ ಕಡ ನೋಡಿಕೊಂಡು ಬರಲು ರೈಲಿನಲ್ಲಿ ಕಳಿಸಿದರು. ವಾಪಸ್ಸು ಬರುವಾಗ ಆಗಲೇ ಹಿಂದೂ ಮುಸಲ್ಮಾನ ಜಾತೀಯ ದಳ್ಳುರಿ ಎಲ್ಲಾಕಡೆ ಹಬ್ಬಿ ಬಿಟ್ಟಿತ್ತು ಸ್ಟೇಷನ್ನುಗಳಲ್ಲಿ ರೈಲುಗಳಲ್ಲಿ ಎಲ್ಲೆಲ್ಲಿ ನೋಡಿದರಲ್ಲಿ ಹೊಡೆದಾಟ, ಕೊಲೆ ಸುಲಿಗೆ, ಹೆಣಗಳು. ಡೆಲ್ಲಿ ಬರುವವರೆಗೆ ಕಿಟಕಿ ಬಾಗಿಲುಗಳನ್ನು ಬದ್ರವಾಗಿ ಲಾಕ್ ಮಾಡಿಕೊಂಡಿರಿ ಯಾವ ಕಾರಣಕ್ಕೂ ತೆಗೆಯಬೇಡಿ ಎಂದು ಎಚ್ಚರಿ ಕೊಟ್ಟಿದ್ದರು, ಕರೆದುಕೊಂಡು ಹೋದವರು ಅಂತೂ ಸುಖವಾಗಿ ಡೆಲ್ಲಿ ಮನ ಸೇರಿದರು. ವಾಪಸ್ಸು ಚಿತ್ರದುರ್ಗಕ್ಕೂ ಬಂದರು.

ದೇಶಕ್ಕೆ ಸ್ವಾತಂತ್ರ್ಯ ಬಂದರೂ ನಿಜಲಿಂಗಪ್ಪನವರ ಹೋರಾ ಮುಗಿಯಲಿಲ್ಲ ಅವರು 1944 ರಿಂದ 1954 ರವರಗೆ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರಾಗಿ, ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುತ್ತಿದ್ದರು. ಮ ಸೇರುತ್ತಿರಲಿಲ್ಲ. ಯಥಾಪ್ರಕಾರ ತಿಂಗಳಲ್ಲಿ ಮೂರುದಿನ ಮನೆ, ಸಂಸಾ ನೋಡಿಕೊಳ್ಳುವ ಜವಾಬ್ದಾರಿ ಎಲ್ಲಾ ಮುರಿಗಮ್ಮನವರದೇ.

ಮನೆಗೆ ಬಂದ ಮೇಲೆ ಕಾಶಿಯ ವಿಷಯ ಹೇಳುವಾಗ ಕಾಶಿ ಎಂತ ಗಲೀಜು ಊರು. ಎಂತಹ ಗಲೀಜು ರೋಗದ ಜನ ದೇವಸ್ಥಾನದ ಹತ್ತಿ ಅಲ್ಲಿ ವಿಶ್ವನಾಥ ಇಲ್ಲವೇ ಇಲ್ಲ. ಎಂದೋ ಅಲ್ಲಿಂದ ಓಡಿಹೋಗಿದ್ದಾ ಎನ್ನುತ್ತಿದ್ದರು ಮುರಿಗೆಮ್ಮನವರು.

ನಿಜಲಿಂಗಪ್ಪನವರ 60ನೇ ಹುಟ್ಟು ಹಬ್ಬದ ದಿನ ಹೆಣ್ಣು ಮಕ್ಕಳು ಆರತಿ ಎತ್ತುತ್ತಿರುವುದು

1956ನೇ ನವಂಬರ್ 1ನೇ ತಾರೀಖು ಕರ್ನಾಟಕ ಏಕೀಕರಣ ಆಯಿತು. ನಿಜಲಿಂಗಪ್ಪನವರು ಅದರ ಮೊದಲಿನ ಮುಖ್ಯಮಂತ್ರಿ ಎಂದು ಸರ್ವಾನುಮತದಿಂದ ಚುನಾಯಿತರಾದರು. ಮುರಿಗೆಮ್ಮನವರಿಗೆ ಜೀವನದಲ್ಲಿ ಮೊದಲಸಲ ವಿಶ್ರಾಂತಿ ಸಿಕ್ಕಿತು. ಬೆಂಗಳೂರಿನ ಮುಖ್ಯಮಂತ್ರಿ

ನಿವಾಸದಲ್ಲಿ ಅನೇಕ ಆಳುಕಾಳುಗಳು ಕೆಲಸ ಮಾಡುತ್ತಿದ್ದರು. ಆಗಲೇ ಮೂರು ಜನ ಹೆಣ್ಣು ಮಕ್ಕಳ ಮದುವೆ ಆಗಿ ಮೊಮ್ಮಕ್ಕಳು ಹುಟ್ಟಿದ್ದರು. ಸಂಸಾರದ ಜವಾಬ್ದಾರಿ ಹೆಚ್ಚಾಗಿತ್ತು. ಮುಖ್ಯಮಂತ್ರಿಗಳ ಪತ್ನಿ ಎಂದು ಮನಸ್ಸಿಗೆ ಬಂದಂತೆ ಖರ್ಚು ಮಾಡುವಂತಿರಲಿಲ್ಲ. ಮುಖ್ಯಮಂತ್ರಿಗಳ ಪಗಾರ ತಿಂಗಳಿಗೆ 1100 ರೂಪಾಯಿ. ಟಿಎ. ಡಿಎ. ಅತಿಥಿ ಸತ್ಕಾರದ ಹಣ ಎಂದು ಬಂದರೂ ನಿಜಲಿಂಗಪ್ಪನವರು ಕೆಲವನ್ನು ತೆಗೆದು ಕೊಳ್ಳುತ್ತಲೇಇರಲಿಲ್ಲ. ಮುಖ್ಯಮಂತ್ರಿಯ ಹೆಂಡತಿಯಾಗಿದ್ದಾಗ, ಮುರಿಗಮ್ಮನವರು ಹೊಸ ಸೀರೆಗಳನ್ನಾಗಲೀ, ಒಡವೆಗಳನ್ನಾಗಲಿ ಕೊಂಡಿದ್ದು ಇರಲಿಲ್ಲ ಮಕ್ಕಳನ್ನು ಸಹ ಸಾದಾ ಹುಡುಗರಂತೆ ಬೆಳೆಸಿದ್ದರು. ಮುಖ್ಯಮಂತ್ರಿಯ ಪತ್ನಿಯಾಗಿ ಯಾವ ಸಮಾರಂಭಗಳಲ್ಲಿಯೂ ಭಾಗವಹಿಸಲಿಲ್ಲ.

ಮುಂದೆ ಒಂದೂವರೆ ವರ್ಷದಲ್ಲೇ, ಏನೇನೋ ರಾಜಕೀಯ ಕಾರಣಗಳಿಂದ ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ಕೊಡಬೇಕಾಯಿತು. ಅದೇ ದಿನವೇ ಚಿತ್ರದುರ್ಗದ ತಮ್ಮ ಮನೆಗೆ ಸಂತೋಷದಿಂದಲೇ ವಾಪಸ್ಸು ಬಂದರು. ಮತ್ತೆ 3–4 ಸಲ ಮುಖ್ಯ ಮಂತ್ರಿ ಆಗಿ ಆಯ್ಕೆಯಾದರು ನಿಜಲಿಂಗಪ್ಪನವರು. ಮುಖ್ಯಮಂತ್ರಿಯ ಪತ್ನಿಯಾಗಿ ಮುರಿಗೆಮ್ಮನವರು ಹೇಗಿದ್ದರು ನೋಡೋಣ.

ಮೊದಲು ಸಲ ಮುಖ್ಯಮಂತ್ರಿ ಆಗಿದ್ದಾಗ, ಮುರಿಗೆಮ್ಮನವರನ್ನು ನೋಡಲು ಅನೇಕ ಪರಿಚಿತರು, ಅಪರಿಚಿತರು, ಮನೆಗೆ ಬರುತ್ತಿದ್ದರು. ಬರುವಾಗ ತಟ್ಟೆಯ ತುಂಬಾ ಹೂವು, ಹಣ್ಣು ತರುತ್ತಿದ್ದರು. ಅವು ಔಚಿತ್ಯ

ಮೀರಿ ಇದ್ದರೆ, ಉಪಾಯವಾಗಿ ತಂದವರಿಗೆ ವಾಪಸ್ಸು ಕೊಡುತ್ತಿದ್ದರು. ನಿಮ್ಮ ಮನೆಯ ಮಕ್ಕಳಿಗೇ ಕೊಡಿ ನಮ್ಮಲ್ಲಿ ಸಾಕಷ್ಟು ಇವೆ ಎಂದು. ಗೌರಿ ಹಬ್ಬದಲ್ಲಿ ಬಾಗಿಣದ ನೆಪ ಮಾಡಿಕೊಂಡು, ಅದರಲ್ಲಿ ದೊಡ್ಡ ಸೀರೆಗಳು ಸಣ್ಣ ಬಂಗಾರದ ಒಡವೆಗಳು, ಹಣ, ಸವರನ್ನು ಇಟ್ಟು ತಂದು ಕೊಡುತ್ತಿದ್ದರು. ಅಂತಹವನ್ನು ನೋಡಿದ ತಕ್ಷಣ ಮುರಿಗೆಮ್ಮನವರು ನೋಡಿ

ಇಂತಹವುಗಳನ್ನು ನೀವು ತಂದುಕೊಡುವಂತಿದ್ದರೆ ನಮ್ಮ ಮನೆಗೆ ಬರಲೇ ಬೇಡಿ ಎಂದು ನಿಷ್ಠೂರವಾಗಿ ಹೇಳಿ ವಾಪಸ್ಸು ಕೊಡುತ್ತಿದ್ದರು. ಏನಾದರೂ ಕೆಲಸ ಮಾಡಿಸಿಕೊಡಿ ಎಂದು ಕೇಳಿದರೆ, ನಾನು ನಿಮಗೆ ಅರಿಶಿನ, ಕುಂಕುಮ, ತಾಂಬೂಲ ಕೊಡಬಲ್ಲೆ, ಕಾಫಿ, ಟೀ ಮಾಡಿಕೊಡಬಲ್ಲೆ. ಅದಕ್ಕಿಂತ ಹೆಚ್ಚಿನ ಕೆಲಸಗಳಿದ್ದರೆ ಮುಂದೆ ಆಫೀಸ್ ಇದೆ, ಅಲ್ಲಿಗೆ ಹೋಗಿ. ದಯವಿಟ್ಟು ಇಲ್ಲಿ ಬರಬೇಡಿ ಎಂದು ಹೇಳಿ ಕಳಿಸುತ್ತಿದ್ದರು. ಇವರಿಂದ ತಮ್ಮ ಕೆಲಸ ಆಗುವುದಿಲ್ಲ ಎಂದು ತಿಳಿದು, ಮುಂದೆ ಯಾರೂ ಕೆಲಸಕ್ಕಾಗಿ ಮನೆಗೆ ಬರುತ್ತಿರಲಿಲ್ಲ. ಮದುವೆಗೆ ಕರೆಯಲು ಬಂದಾಗಲೂ ಸೀರೆ, ಒಡವೆ ಕೊಡಲು ಪ್ರಯತ್ನಿಸುತ್ತಿದ್ದರಂತೆ. ಮುರಿಗೆಮ್ಮನವರು ಅದಕ್ಕೆ ಆಸ್ಪದವನ್ನೇ ಕೊಡುತ್ತಿರಲಿಲ್ಲ. ಅವರು ಮನಸ್ಸು ಮಾಡಿದ್ದರೆ ಬೇಕಾದಷ್ಟು ಅನ್ಯಾಯದ ಹಣ ಗಳಿಸಬಹುದಿತ್ತು. ಮಂತ್ರಿಗಳು, ಅಧಿಕಾರಿಗಳ ಹೆಂಡತಿಯರಿಗೆ ಹಣ, ಬಂಗಾರ ತೆಗೆದುಕೊಳ್ಳಲು ಬೇಕಾದಷ್ಟು ಅವಕಾಶಗಳು ಇರುತ್ತವೆ. ಗಂಡನ ಹೆಸರನ್ನು ಉಳಿಸುವುದೂ ಕೆಡಿಸುವುದೂ ಹೆಂಡತಿಯ ಕೈಲಿ ಇರುತ್ತದೆ. ಮುರಿಗೆಮ್ಮನವರು ಪತಿಯ ಹೆಸರಿಗೆ ಕಳಂಕದ ಸಣ್ಣ ಚುಕ್ಕಿಯೂ ಬರದಂತೆ ನೋಡಿಕೊಂಡರು.

ಮುರಿಗೆಮ್ಮನವರು ಮುಖ್ಯಮಂತ್ರಿಯ ಪತ್ನಿಯಾಗಿ 2– ಸಮಾರಂಭಗಳಲ್ಲಿ ಮಾತ್ರ ಭಾಗವಹಿಸಿದ್ದರು. ಶರಾವತಿಯ ಪ್ರಾರಂಭೋತ್ಸವಕ್ಕೆ ಅವರನ್ನು ನಿಜಲಿಂಗಪ್ಪನವರು ಕರೆದುಕೊಂಡು ಹೋಗಿದ್ದರು. ಲಾಲಬಹಾದುರು ಶಾಸ್ತ್ರಿಯವರೂ, ಅವರ ಪತ್ನಿ ಲಲಿತಾ ಶಾಸ್ತ್ರೀ ಅವರೂ ಬಂದಿದ್ದರು. ಲಲಿತಾ ಅವರು ಪತಿಗಿಂತ ಎತ್ತರವಾಗಿದ್ದರು

ಕವಿಯಿತ್ರಿ. ಇಬ್ಬರೂ ಸರಳ ಸಜ್ಜನರು. ಮತ್ತೊಂದೆರಡು ಸಮಾರಂಭಗಳಿಗೆ ಮುರಿಗೆಮ್ಮನವರು ಹೋಗಿಬರಹುದು ಅಷ್ಟೆ.

1959ರಲ್ಲಿ ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿದ್ದರು. ಯಾವ ಅಧಿಕಾರ ಇರಲಿಲ್ಲ. ಆಗ ಅವರನ್ನು ಭಾರತ ಸರಕಾರದವರು, ಭಾರತೀಯ ಆಯಿಲ್ ಕಾರ್ಪೋರೇಶನ್‌ನ ಅಧ್ಯಕ್ಷರನ್ನಾಗಿ ಮಾಡಿದರು. ಅವರು ತಿಂಗಳಿಗೆ 8000 ರೂಪಾಯಿ ಪಗಾರ ಪಡೆಯಬಹುದಿತ್ತು. ಆದರೆ ನಿಜಲಿಂಗಪ್ಪನವರು ನಾಮಕಾವಸ್ತೆಗೆ ಒಂದುರೂಪಾಯಿ ಪಗಾರ ಪಡೆಯುತ್ತಿದ್ದರು. ಯಾವಾಗಲೂ ಸಂಸಾರದ ಖರ್ಚಿಗೆ ತೊಂದರೆ ಪಡುತ್ತಿದ್ದ ಮುರಿಗೆಮ್ಮನವರು ಪೂರ್ತಿ ಪಗಾರ ಪಡೆಯಲು ಒತ್ತಾಯ ಮಾಡಬಹುದಿತ್ತು. ಆದರೆ ಮಾಡಲಿಲ್ಲ ಎಂದು ಕಾಣುತ್ತದೆ. ಎರಡು ಸಲ ಭಾರತದ ಅಧ್ಯಕ್ಷರಾಗಲು ಅವರ ಹೆಸರನ್ನು ಆಯ್ಕೆ ಮಾಡಿದ್ದರು ಎಂದು ಪೇಪರುಗಳಲ್ಲಿ ಬಂದಿತ್ತು. ಅವರ ಬಗ್ಗೆ ಮುರಿಗೆಮ್ಮನವರು ಪತಿಯೊಡನೆ ಮಾತನಾಡಿದರೇ ಗೊತ್ತಿಲ್ಲ. ಯಾವ ವಿಷಯವಾಗಿಯೇ ಆಗಲಿ ಪತಿಯ ಅಭಿಪ್ರಾಯಕ್ಕೆ ವಿರುದ್ಧ ನಡೆಯುತ್ತಿರಲಿಲ್ಲ. ಪತಿಯನ್ನೇ ಅನುಸರಿಸುತ್ತಿದ್ದರು. ಪತಿಗೆ ಸಂಸಾರದ ಯಾವ ಕಷ್ಟದ ಬಿಸಿ ಹತ್ತದಂತೆ, ಯಾವ ಚಿಂತೆ ಬರದಂತೆ ಕೊಟ್ಟಷ್ಟು ಹಣದಲ್ಲಿ ಸಂಸಾರ ಸಾಗಿಸುತ್ತಿದ್ದರು. ಮನೆಯಲ್ಲಿ ಗಂಡ ಇಲ್ಲ ಎಂದು ಹಬ್ಬದಡಿಗೆ ಮಾಡುವುದನ್ನು ಬಿಡಲಿಲ್ಲ. ಮಕ್ಕಳಿಗೂ ತನ್ನ ಕೈಲಾದಷ್ಟು ಮಾಡುತ್ತಿದ್ದರು. ಹೆಣ್ಣು ಮಕ್ಕಳು ಬಾಣಂತಿತನಕ್ಕೆ ಬಂದಾಗ ಉತ್ಸಾಹದಿಂದ ಮಾಡುತ್ತಿದ್ದರು. ಕೂಸು ಬಾಣಂತಿ ಸುಖವಾಗಿ ಅವರ ಮನೆ ಸೇರುವವರೆಗೆ, ಅವರದ್ದೇ ಜವಾಬ್ದಾರಿ. ಲಾಯರಾಗಿ ಸಮೃದ್ಧ ಜೀವನ ನಡೆಸಿದಾಗಲೂ, ಪತಿ ಜೈಲಿನಲ್ಲಿದ್ದಾಗ ಸಂಸಾರ ನಡೆಸುವುದು ಕಷ್ಟವಾದಾಗಲೂ ಮುಖ್ಯಮಂತ್ರಿಯಾಗಿ ಉನ್ನತ ಅಧಿಕಾರಿಯ ಪತ್ನಿಯಾದಾಗಲೂ, ಕಾಂಗ್ರೆಸ್ ಅಧ್ಯಕ್ಷರ ಪತ್ನಿಯಾಗಿ ದೆಹಲಿಯಲ್ಲಿದ್ದಾಗಲೂ ಮೊದಲು ಹೇಗಿದ್ದರೋ, ಎಲ್ಲಾ ಕಳೆದುಕೊಂಡು ವಾಪಸ್ಸು ಚಿತ್ರದುರ್ಗದ ತಮ್ಮ ಮನೆಗೆ ಬಂದ ಮೇಲೂ ಹಾಗೆಯೇ ಇದ್ದರು.

ಶರವಾತಿ ವಿದ್ಯುತ್ ಯೋಜನೆಯ ಉದ್ಘಾಟನೆ ಸಂದರ್ಭದಲ್ಲಿ
ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ, ಶ್ರೀಮತಿ ಲಲಿತಾ ಶಾಸ್ತ್ರಿ ಮತ್ತು
ಅಮೇರಿಕಾ ರಾಯಬಾರಿ ಚೆಸ್ಟರ್ ಬೌಲ್ಸ ದಂಪತಿಗಳೊಂದಿಗೆ

ಮನಸ್ಸಿನ ಸಂತೋಷ ಸುಖ ದುಃಖ ಅಸಮಾಧಾನ ಕಷ್ಟ ತೊಂದರ ಯಾವ ಭಾವನೆಯನ್ನೂ ಬೇರೆ ಯಾರಿಗೂ ತೋರಿಸುತ್ತಿರಲಿಲ್ಲ. ಯಾರ ಹತ್ತಿರವೂ ಹಂಚಿಕೊಳ್ಳುತ್ತಿರಲಿಲ್ಲ. ಮಕ್ಕಳು ಸಣ್ಣವರಿದ್ದಾಗ ಮಕ್ಕಳ ಮೇಲೆಸಿಟ್ಟನ್ನು ತೋರಿಸಿಕೊಳ್ಳಲು ಯತ್ನಿಸುತ್ತಿದ್ದರು. ಅವರು ಹೊಡೆಯುವುದಕ್ಕೆ ಬರುತ್ತಾರೆಂದು ತಿಳಿಯುತ್ತಲೇ, ಮಕ್ಕಳು ನಗುತ್ತಾ ಕೈಗ ಸಿಗದಂತೆ ಓಡುತ್ತಿದ್ದರು. ಮಕ್ಕಳೂ ಅಷ್ಟೆ, ರೊಟ್ಟಿ, ಚಟ್ನಿ, ಸಾರು, ಮುದ್ದೆ ಬಿಸಿಯದ್ದು ತಂಗಳದ್ದು ಎನ್ನದೆ ಇದ್ದುದನ್ನು ಸುಮ್ಮನೆ ಸ್ವೀಕಾರಮಾಡುತ್ತಿದ್ದರು ತಾಯಿಗೆ ಎಷ್ಟು ಸಂಕಟವಾಗುತ್ತಿತ್ತೋ! ಮನಸ್ಸಿನಲ್ಲಿನ ಸಂಕಟವೆಲ್ಲಾ ಎದೆನೋವಿನ ರೂಪದಲ್ಲಿ ಹೊರಬಂದಿರಬೇಕು. ಮೊದಲಸಲ ಮುಖ್ಯಮಂತ್ರಿ ಆಗಿ ವಾಪಸ್ಸು ಬಂದಾಗ ಇರಲಿಲ್ಲ. ಅದೇ ಮೊದಲ ಸಲ ಎದೆನೋವು ಬಂದಿತು. ನಂತರ ಆಗಾಗ ಬರುತ್ತಲೇ ಇತ್ತು. ಜೊತೆಗೆ ಗಂಡು ಮಕ್ಕಳಿಬ್ಬರೂ ಮದುವೆ ಆಗಲಿಲ್ಲ ಎನ್ನುವ ಸಂಕಟವೂ ಸೇರಿಕೊಂಡಿತ್ತು.

ಕರ್ನಾಟಕದ ಮುಖ್ಯಮಂತ್ರಿಯಾಗಿ 3–4 ಸಲ ಆಯ್ಕೆಯಾಗಿ ನಿಜಲಿಂಗಪ್ಪನವರು ಉತ್ತಮ ಕೆಲಸಗಳನ್ನು ಮಾಡಿದರು. ಇನ್ನುಮಾಡುವುದು ಇತ್ತು. ಆಗ ದೆಹಲಿಯ ಕಾಂಗ್ರೆಸ್ ವರಿಷ್ಠರಿಗೆ, ಇಂದಿರಾ ಗಾಂಧಿಯವರಾದಿಯಾಗಿ, ನಿಜಲಿಂಗಪ್ಪನವರನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಅಪೇಕ್ಷೆ ಹುಟ್ಟಿತು. ಮೊದಲು ನಿಜಲಿಂಗಪ್ಪನವರು ಒಪ್ಪದಿದ್ದರೂ, ಕೊನೆಗೆ ಒತ್ತಾಯಕ್ಕೆ ಒಪ್ಪಬೇಕಾಯಿತು. ಆದರೆ ಮುರಿಗೆಮ್ಮನವರು ಒಪ್ಪಬೇಡಿ ಎಂದರು. ಕರ್ನಾಟಕದಲ್ಲಿ ನೀವು ಮಾಡಬೇಕಾದ ಕೆಲಸಗಳು ಇನ್ನೂ ಇವೆ. ಅಲ್ಲದೆ ಅಧ್ಯಕ್ಷ ಪದ ಅತಿ ಉನ್ನತ ಸ್ಥಾನ. ಅದರ ಅವಧಿ ಎರಡು ವರ್ಷಗಳು. ನಂತರ ನೀವು ವಾಪಸ್ಸು ಮನೆಗೇ ಬರಬೇಕಾಗುತ್ತದೆ. ಸರಿಯಾಗಿ ಯೋಚಿಸಿ, ನಿರ್ಧಾರ ಮಾಡಿ ಎಂದರು. ಮೇಲಿನವರ ಒತ್ತಾಯಕ್ಕೆ ಕಟ್ಟುಬಿದ್ದು, ಕರ್ನಟಕದ ಮುಖ್ಯಮಂತ್ರಿ ಪದ ಬಿಟ್ಟು ಕಾಂಗ್ರೆಸ್ ಅಧ್ಯಕ್ಷರಾಗಿ ನಿಜಲಿಂಗಪ್ಪನವರು ದೆಹಲಿಗೆ ಹೊರಟರು.

ಮುರಿಗೆಮ್ಮ ನವರು ಹೆಚ್ಚು ವಿದ್ಯಾವಂತೆ ಅಲ್ಲದಿದ್ದರೂ, ಪ್ರಪಂಚ ಜ್ಞಾನ ಚೆನ್ನಾಗಿ ಇದ್ದಿತು. ದಿನವೂ ರಾಜಕೀಯವನ್ನು ನೋಡಿ, ಓದಿ, ಕೇಳಿ ವಿಮರ್ಶೆ ಮಾಡುವಷ್ಟು ತಿಳಿವಳಿಕೆ ಬಂದಿತ್ತು. ಕೊನೆಗೆ ಅವರು ಹೇಳಿದಂತೆಯೇ ಆಯಿತು.

ನಿಜಲಿಂಗಪ್ಪನವರು ಹೈದರಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷಪದ ವಹಿಸಿಕೊಂಡರು. ಮನೆಯವರೆಲ್ಲಾ ನಾಗಾರ್ಜುನ ಸಾಗರ ನೋಡಲು ಹೊರಟರು. ನದಿಯ ಮೇಲೆ ಬೋಟಿನಲ್ಲಿ ಹೋಗಬೇಕಿತ್ತು. ಮುರಿಗೆಮ್ಮನವರೂ ಹೋಗಿದ್ದರು. ಕುಳಿತುಕೊಳ್ಳಲು ವ್ಯವಸ್ಥೆಇರಲಿಲ್ಲ. ನಿಂತೇ ಹೋಗಬೇಕಾಗಿತ್ತು. ನಾವೆಯಲ್ಲಿ ಹೋಗುತ್ತಿರುವಾಗ ಮುರಿಗೆಮ್ಮನವರು ಅಕಸ್ಮಾತ್ ಒಂದು ಹೆಜ್ಜೆ ಹಿಂದೆ ಇಟ್ಟರು ಅವರ ಒಂದು ಕಾಲು ಎರಡು ಅಡಿ ಅಗಲದ ತೂತಿನೊಳಗೆ ಕೆಳಗೆ ಹೋಯಿತು. ಪಕ್ಕದಲ್ಲಿದ್ದ ಮಗಳು ಬಲವಾಗಿ ಹಿಡಿದುಕೊಂಡಿರದಿದ್ದರೆ ಆ ತೂತಿನಲ್ಲಿ ನದಿಗಾದರೂ ಬೀಳಬಹುದಿತ್ತು. ಕೈಕಾಲಾದರೂ ಮುರಿಯಬಹುದಿತ್ತು. ಅಧಿಕಾರಿಗಳು

ಸುಧಾರಿಸಿಕೊಳ್ಳಲು ಅರ್ಧಗಂಟೆ ಬೇಕಾಯಿತು. ಈ ವಿಷಯ ಮುರಿಗೆಮ್ಮನವರು ಯಾರಲ್ಲಿಯೂ ಬಾಯಿಬಿಡಲಿಲ್ಲ.

ಒಂದು ರಾತ್ರಿ ಹೈದರಾಬಾದಿನಲ್ಲಿ 10 ಗಂಟೆಗೆ ಪ್ರಸಿದ್ಧ ಸಿನಿಮಾ ತಾರೆ ರಾಜಾಸುಲೋಚನಾಳ ನೃತ್ಯ ಇದ್ದಿತು. ಮುರಿಗೆಮ್ಮನವರೂ ಹೋಗಿದ್ದರು. ಅಲ್ಲಿ ಸೇರಿದ್ದ ಜನರನ್ನು ನೋಡಿದರೆ; ಜನ ಸಾಗರ ಎನ್ನುವುದು ಅಕ್ಷರಶಃ ನಿಜವಾಗಿತ್ತು. ಕಣ್ಣು ದೃಷ್ಟಿ ಹೋಗುವವರೆಗೆ ಜನ. ಏನಾದರೂ ಗಲಾಟೆಯಾಗಿ ನೂಕುನುಗ್ಗಲಾದರೆ ಗಿತಿ ಏನು ಎನ್ನುವ ಯೋಚನೆ ಮುರಿಗೆಮ್ಮನವರಿಗೆ ಬಂದು ತಮ್ಮವರೊಡನೆ ಅರ್ಧಕ್ಕೇ ಎದ್ದು ಬಂದಿದ್ದರು. ಅವರಿಗೆ ನೃತ್ಯ ನೋಡುವುದಕ್ಕಿಂತ ತಮ್ಮ ಕುಟುಂಬದವರ ಸುರಕ್ಷತೆಯೇ ಮುಖ್ಯವಾಗಿತ್ತು.

ದೆಹಲಿಯಲ್ಲಿ 6 ಜನಪತ್ ನಂಬರಿನ ಮನೆಯನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ಕೊಟ್ಟಿದ್ದರು. ಆ ಮನೆಯಲ್ಲಿ ಇದ್ದವರಿಗೆ ಒಳ್ಳೆಯದಾಗುವುದಿಲ್ಲ. ಬೇರೆ ಮನೆಗೆ ಹೋಗಿ ಎಂದು ಮುರಿಗೆಮ್ಮನವರಿಗೆ ಬಹಳ ಜನ ಹೇಳಿದರಂತೆ. ಅಂತಹ



ಅಂದಿನ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿ ಅವರೊಂದಿಗೆ

ಮೂಢ ನಂಬಿಕೆಗಳನ್ನು ಅವರಿಬ್ಬರೂ ನಂಬುತ್ತಿರಲಿಲ್ಲ. ದೇವಸ್ಥಾನಗಳಿಗೆ ಹೋಗುವುದಾಗಲೀ, ದೇವರಿಗೆ ಹರಕೆ ಮುಡಿಪು ಕಟ್ಟುವುದಾಗಲೀ ಜೀವನದಲ್ಲಿ ಒಮ್ಮೆಯೂ ಮುರಿಗೆಮ್ಮನವರು ಮಾಡಿದವರಲ್ಲ. ಭವಿಷ್ಯವನ್ನೂ ಕೇಳುತ್ತಿರಲಿಲ್ಲ. ಮಕ್ಕಳು ಹುಟ್ಟಿದಾಗ ಸಹ ನಕ್ಷತ್ರ ಮುಂತಾದುವನ್ನು ಆಗಲೇ ಕೇಳಿದವರಲ್ಲ, ಮುಂದೆ ಯಾವಾಗಲೋ 12–14 ವಯಸ್ಸಿನ ಗಂಡುಮಕ್ಕಳು ಕೇಳಿಕೊಂಡು ಬರುತ್ತಿದ್ದರು. ಕೊನೆಯ ಮಗಳು ಹುಟ್ಟಿದಾಗ ಎರಡು ವಾರಗಳ ಮೇಲೆ ಹೋಗಿ ಕೇಳಿದ್ದರು. ಶಾಸ್ತ್ರಿಗಳು ಗಡಿಯಾರ ಸರಿಯಾಗಿತ್ತೇ ಹೆಣ್ಣು ಮಗು ಆರೋಗ್ಯವಾಗಿ ಬದುಕಿದೆಯಾ ಎಂದೆಲ್ಲಾ ಕೇಳಿದರಂತೆ. ಕೊನೆಗೆ ನೀವೇ ಓದಿಕೊಳ್ಳಿ ಎಂದರಂತೆ. ಆ ಮೂಹೂರ್ತದಲ್ಲಿ ಹುಟ್ಟಿದ ಹೆಣ್ಣು ಮಗು ಮೂರು ದಿನಗಳೊಳಗೆ ಸಾಯುತ್ತದೆ ಎಂದು ಇತ್ತಂತೆ. ಇಂತಹ ಅನೇಕ ಉದಾಹರಣೆಗಳು ಇವೆ. ಈಗ ಆ ಮಗಳಿಗೆ 64 ವರ್ಷ.

ಡೆಲ್ಲಿಯಲ್ಲಿ ಮನೆಮಾಡಿದ ಮೇಲೆ, ಬರೀ ತಮ್ಮ ಬಟ್ಟೆಗಳನ್ನೂ ವೈಯ್ಯಕ್ತಿಕ ಸಾಮಾನುಗಳನ್ನಷ್ಟೇ ತೆಗೆದುಕೊಂಡು ಹೋದರು. ಜೊತೆಗೆ ಸಣ್ಣ ಮಗಳೂ ಇದ್ದಳು. ಅವಳಿಗಿನ್ನೂ ಮದುವೆ ಆಗಿರಲಿಲ್ಲ. ಮುರಿಗೆಮ್ಮನವರಿಗೆ ಕನ್ನಡ ಬಿಟ್ಟು, ಬೇರೆ ಭಾಷೆ ಬರುತ್ತಿರಲಿಲ್ಲ. ದೆಹಲಿಯಲ್ಲಿ ಬರೀ ಹಿಂದಿ. ಕೆಲಸದವರ ಜೊತೆ ಮಾತನಾಡುವುದಕ್ಕೆ ಆಗದೆ, ಯಾವ ಕೆಲಸ ಮಾಡಿಸುವುದಕ್ಕೂ ಕಷ್ಟವಾಯಿತು. ತೀರಾ ದೊಡ್ಡ ಮನೆ. ಹಿಂದಿನ ಎರಡು ರೂಮುಗಳಲ್ಲಿ ಒಂದರಲ್ಲಿ ಮಗಳು ಪೂರ್ಣಿಮಾ, ಇನ್ನೊಂದರಲ್ಲಿ ಮುರಿಗೆಮ್ಮ ನಿಜಲಿಂಗಪ್ಪ. ಅಧ್ಯಕ್ಷರ ಮನೆಗೆ ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ ರಾತ್ರಿ ಎಂದು ಊಟ ತಿಂಡಿಗಳಿಗೆ ಭಾರತದ ಮುಖಂಡರು, ಪರದೇಶಗಳ ಮುಖಂಡರು ಬರುತ್ತಿದ್ದರು. ಅವರಿಗೆಲ್ಲಾ ಅಡಿಗೆ ಮಾಡಿಸುವ ಜವಾಬ್ದಾರಿ ಸಣ್ಣದೇನಲ್ಲ. ಅಡಿಗೆಯ ಮುರಳಿ ಎನ್ನುವವನಿಗೆ ಹರಕು ಮುರುಕು ಕನ್ನಡ ಬರುತ್ತಿತ್ತು. ದೋಸೆ ಇಡ್ಲಿ ಮುಂತಾಗಿ ದಕ್ಷಿಣದ ಏನೇ ಅಡಿಗೆ ಮಾಡಿದರೂ ಪ್ರೀತಿಯಿಂದ ತಿನ್ನುತ್ತಿದ್ದರು. ಮನೆ ಮುಂದೆ ಮಾರಲು ಬರುವ ತರಕಾರಿಯವರೊಡನೆ

ಸಾಮಾನು ಕೊಳ್ಳುವುದು ಮುರಿಗೆಮ್ಮನವರಿಗೆ ಇಷ್ಟವಾಗುತ್ತಿತ್ತು. ಅವರು ಹಿಂದಿಯಲ್ಲಿ ಇವರು ಕನ್ನಡದಲ್ಲಿ ಚೌಕಾಶಿ ಮಾಡುತ್ತಿದ್ದರು. ಕೇಳಲು

ತಮಾಷೆಯಾಗಿರುತ್ತಿತ್ತು. ಕೊನೆಗೆ ಏಕ್, ದೋ, ತೀನ್ ಎಂದು ಎಣಿಸಲು ಅಚ್ಚಾ ನಹೀ, ಟೀಕ್ ಹೈ ಎನ್ನಲೂ ಕಲಿತರು. ದೆಹಲಿಯಲ್ಲಿ ನೋಡಲು ಅನೇಕ ಚಾರಿತ್ರಿಕ ಸ್ಥಳಗಳಿವೆ; ಸುಂದರವಾದ ಜಾಗಗಳಿವೆ. ಅವೆಲ್ಲವನ್ನೂ ನೋಡಿದರು. ಯಾವಾಗಾದರೂ ಪತಿಯೊಡನೆ ಸಂಗೀತ, ನೃತ್ಯ ಮುಂತಾದುವಕ್ಕೆ ಹೋಗುತ್ತಿದ್ದರು. ಸ್ವಾತಂತ್ರ್ಯ ದಿನದ ಮೆರವಣಿಗೆ, ದಸರಾದಲ್ಲಿ ಕೊನೆಯ ದಿನ ರಾವಣ ಸಂಹಾರ ಮುಂತಾದವನ್ನು ಆಸಕ್ತಿಯಿಂದ ನೋಡುತ್ತಿದ್ದರು. ಮೊಮ್ಮಕ್ಕಳು ಬಂದಾಗ ಅವರಿಗೆ ಬೇಕಾದ ಅಡಿಗೆ ತಿಂಡಿ ಸ್ಪೇಷಲ್ ಆಗಿ ಮಾಡಿಸುತ್ತಿದ್ದರು. ಯಾರಾದರೂ ಬೆಂಗಳೂರಿಗೆ ಹೋಗುವವರಿದ್ದರೆ, ಉಪ್ಪಿನಕಾಯಿ, ಸಿಹಿ, ಖಾರದ ತಿಂಡಿ ಮಾಡಿಸಿ ಕಳಿಸುತ್ತಿದ್ದರು. ಅದೇ ಅವರಿಗೆ ಸಂತೋಷ.

ಕನ್ನಡ ಮಾತನಾಡುವ ದೆಹಲಿಯಲ್ಲಿ ವಾಸವಾಗಿದ್ದ ಕೆಲವು ಬೆಂಗಳೂರಿನ ಪರಿಚಿತರು ಸ್ನೇಹಿತರು ಆಗಾಗ ಮನೆಗೆ ಬರುತ್ತಿದ್ದರು. ಆಗ ಮನೆಯಲ್ಲಿ ಸಣ್ಣದೊಂದು ಕಪ್ಪು ಬಿಳುಪಿನ ಟೆಲಿವಿಷನ್ ಇತ್ತು. ಅದರಲ್ಲಿ ಸುದ್ದಿ ಕೇಳುತ್ತಿದ್ದರು. ಹಾಕಿದ ಸಿನಿಮಾ ನೋಡುತ್ತಿದ್ದರು. ಆದರೆ ಅವರಿಗೆ ತಾನು ಒಂಟಿ ಎನಿಸುತ್ತಿತ್ತು ಹೆಚ್ಚು ಓಡಾಡುವುದಕ್ಕಾಗುತ್ತಿರಲಿಲ್ಲ; ಕಣ್ಣು ಅಷ್ಟು ಸರಿಯಾಗಿ ಕಾಣುತ್ತಿರಲಿಲ್ಲ. ತೋಟ ತೀರಾ ದೊಡ್ಡದಿತ್ತು. ಮುಂದೆ ಯಾವಾಗಲೂ ಜನ ಬರುವವರು. ಹೀಗಾಗಿ ಹಿಂದೆ ತೋಟದಲ್ಲಿ ಹೆಚ್ಚಾಗಿ ಇರುತ್ತಿದ್ದರು. ಜೊತೆಗೆ ಯಾರಾದರೂ ಇರಲೇಬೇಕಾಗಿತ್ತು. ಹೆಚ್ಚಾಗಿ ಮಗಳು ಜೊತೆಗಿರುತ್ತಿದ್ದಳು.

ಆಗಾಗ ಇಂದಿರಾಗಾಂಧಿ ಬಂದು ನಿಜಲಿಂಗಪ್ಪನವರನ್ನು ಬೆಟ್ಟಿಯಾಗುತ್ತಿದ್ದರು. ಮುರಿಗೆಮ್ಮನವರು ಅಲ್ಲಿಯೇ ಪಕ್ಕದಲ್ಲಿ ಕುಳಿತಿರುತ್ತಿದ್ದರು. ಮೊದಲು ಇಬ್ಬರೂ ತಮ್ಮ ತಮ್ಮ ಮೊಮ್ಮಕ್ಕಳ ವಿಷಯ

ಮಾತಾಡಿ ನಂತರ ದೇಶದ ರಾಜಕೀಯ ಮಾತಾಡುತ್ತಿದ್ದರಂತೆ. ಮೊಮ್ಮಕ್ಕಳೆಂದರೆ ಇಬ್ಬರಿಗೂ ಸಂತೋಷವೇ. ಒಂದು ಸಲ ಮಾತುಕತೆ ಆಡಲು ಮನೆಗೆ ಬರುತ್ತೇನೆಂದು ಇಂದಿರಾಗಾಂಧಿ ಹೇಳಿದ್ದರಂತೆ. ಮುರಿಗೆಮ್ಮನವರು ರಾತ್ರಿ ಅಡಿಗೆ ಮಾಡಿಸಿಕೊಂಡು ಕಾದರಂತೆ. ಬರಲಿಲ್ಲ. ರಾಜಕೀಯ ಏನಿದ್ದರೇನು ಊಟಕ್ಕೆ ಬರುವುದಕ್ಕೇನು ಎಂದು ಮುರಿಗೆಮ್ಮನವರು ಆ ವಿಷಯ ಬಂದಾಗಲೆಲ್ಲಾ ಬೇಜಾರಿಂದ ಹೇಳುತ್ತಿದ್ದರು. ರಾಜಕೀಯ ಭಿನ್ನಾಭಿಪ್ರಾಯದಿಂದ ಕಾಂಗ್ರೆಸ್ ಇಬ್ಭಾಗವಾಗಿ ನಿಜಲಿಂಗಪ್ಪನವರು ರಾಜಕೀಯ ಬಿಟ್ಟು ಕಾಯಂ ಆಗಿ ಚಿತ್ರದುರ್ಗಕ್ಕೆ ಬಂದರು.

ಆಗ ಚಿತ್ರದುರ್ಗದ ಮನೆ ಬಾಡಿಗೆ ಕೊಟ್ಟಿತ್ತು. ಖಾಲಿ ಆಗಿ ಮನೆ ರಿಪೇರಿ ಮಾಡಿಸಿ ಅಲ್ಲಿಗೆ ಬರಲು 5-6 ತಿಂಗಳು ಕಾಯಬೇಕಿತ್ತು. ಧಾರವಾಡದಲ್ಲಿ ಹಿರಿ ಮಗ ಉಮಾಕಾಂತನ ಮನೆಯಲ್ಲಿ ಕೆಲವು ತಿಂಗಳು ಇದ್ದರು. ಚಿತ್ರದುರ್ಗದಲ್ಲಿ ಎರಡನೆಯ ಮಗ ರಾಜಶೇಖರ ಊರಹೊರಗೆ ತೋಟ

ಕಿರಿಯ ಪುತ್ರಿ ಪೂರ್ಣಿಮಳೊಂದಿಗೆ

ಮಾಡುತ್ತಿದ್ದು, ಆ ತೋಟದಲ್ಲಿ ಒಂದು ರೂಮಿನ ಮನೆ ಇತ್ತು. ಅಲ್ಲಿ ಕೆಲವು ತಿಂಗಳಿದ್ದು, ನಂತರ ಸ್ವಂತ ಮನೆಗೆ ಒಂದು ಖಾಯಂ ಆಗಿ ನೆಲೆಸಿದರು.

ಕೊನೆಯ ಮಗಳು ಪೂರ್ಣಿಮಾ ಮದುವೆ ಬೆಂಗಳೂರಿನಲ್ಲಿ 1970ರಲ್ಲಿ ಆಯಿತು. ಅವಳು ಗಂಡನ ಜೊತೆ ಕೆನಡಾಕ್ಕೆ ಹೋದಳು. ಎಲ್ಲಾ ಹೆಣ್ಣು ಮಕ್ಕಳ ಮದುವೆ ಆಯಿತು–ಇಬ್ಬರು ಗಂಡು ಮಕ್ಕಳ ಮದುವೆ ಆಗಲಿಲ್ಲ. ಕೊನೆಯ ಮಗ ಕಿರಣಶಂಕರನ ಮದುವೆ ಬೆಂಗಳೂರಿನಲ್ಲಿ 1975ರಲ್ಲಿ ಆಗಿ ಅಲ್ಲಿಯೇ ನೆಲೆಸಿದ್ದಾನೆ. ಉಮಾಕಾಂತ ಯೂನಿವರ್ಸಿಟಿಯಲ್ಲಿ ರೀಡರ್ ಆಗಿ ಧಾರವಾಡದಲ್ಲಿ ನೆಲೆಸಿದ್ದಾನೆ. ರಾಜಶೇಖರ ತೋಟಮಾರಿ ತಂದೆ ತಾಯಿಗಳ ಜೊತೆಗಿದ್ದು ಅವರಿಬ್ಬರನ್ನು ಕೊನೆಯತನಕ ಚೆನ್ನಾಗಿ ನೋಡಿಕೊಂಡನು. ಎಲ್ಲಾ ಮೊಮ್ಮಕ್ಕಳ ಬಾಣಂತಿತನಗಳನ್ನು ಮುರಿಗೆಮ್ಮನವರು ಸ್ವತಃ ಮಾಡಿದ್ದಾರೆ. ತಮಗೆ ಎಷ್ಟು ತೊಂದರೆಯಾದರೂ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಂಡಿದ್ದಾರೆ. ಒಂದೊಂದು ವರ್ಷ, ವರ್ಷಕ್ಕೆ 3–4 ಬಾಣಂತಿತನಗಳನ್ನು ಮಾಡಿದ್ದಾರೆ.

ಮಕ್ಕಳನ್ನು ಕರೆಸುವುದು ಕಳಿಸುವುದು ಮೊಮ್ಮಕ್ಕಳು ಹುಟ್ಟಿದಾಗ ಕೊಡಬೇಕಾದ ಸಾಮಾನು ಕೊಡುವುದು. ಎಲ್ಲಾ ಮುರಿಗೆಮ್ಮನವರದೇ, ಆರ್ಥಿಕವಾಗಿ ತಮ್ಮ ಕೈಲಿ ಆದಷ್ಟನ್ನು ಕೊಡುತ್ತಿದ್ದರು. ಮನೆಗೆ ಅತಿಥಿಗಳು ಬಂದಾಗ ಅರಿಶಿನ, ಕುಂಕುಮ, ಹೂವು, ಹಣ್ಣು, ಕಾಯಿ, ಎಲೆಅಡಿಕೆ ಕೊಟ್ಟು ಕಳಿಸುತ್ತಿದ್ದರು. ಅಪರೂಪದವರಾದರೆ ಶಾಲು ಕೊಡುತ್ತಿದ್ದರು. ಅತಿಥಿಗಳು ಬಂದ ಹೊತ್ತಿಗೆ ಅನುಗುಣವಾಗಿ, ತಿಂಡಿ, ಊಟ ಏರ್ಪಾಡು ಮಾಡಿಸುತ್ತಿದ್ದರು. ಮಕ್ಕಳು ಮೊಮ್ಮಕ್ಕಳು ಬಂದಾಗ ಅವರಿಗೆ ಏನು ಇಷ್ಟ ಎಂದು ಅದನ್ನೇ ಮಾಡಿಸುತ್ತಿದ್ದರು. ಪ್ರತಿಯೊಬ್ಬರ ಅಗತ್ಯತೆ ಏನೆಂದು ತಿಳಿದು ಏರ್ಪಾಡು ಮಾಡಿಸುತ್ತಿದ್ದರು. ನಿಜಲಿಂಗಪ್ಪನವರ ಬಗ್ಗೆ ವಿಪರೀತ ಕಾಳಜಿ ಅವರಿಗೆ. ಬೇಕಾದ್ದು ಬೇಡವಾದದ್ದು ಮೊದಲೇ ತಿಳಿದುಕೊಂಡು ಏರ್ಪಾಡು ಮಾಡುತ್ತಿದ್ದರು.

ಪ್ರತಿ ವರ್ಷ ಅವರ ಹುಟ್ಟು ಹಬ್ಬಕ್ಕೆ (ಡಿಸೆಂಬರ್ 10, 1902) ಮನೆ, ಕಾಂಪೌಂಡು ಎಲ್ಲವನ್ನು ಲಕ ಲಕ ಎನ್ನುವಂತೆ ಸ್ವಚ್ಛ ಮಾಡಿಸುತ್ತಿದ್ದರು. ಮುಂದಿನ ಕಲ್ಲು ಕಂಬಗಳನ್ನು ಸಹ ಸೋಪು ಸೋಡಾ ಹಾಕಿ ತಿಕ್ಕಿಸಿ ಬೆಳ್ಳಗೆ ಕಾಣುವಂತೆ ಮಾಡುತ್ತಿದ್ದರು. ಶಕ್ತಿ ಇರುವವರೆಗೆ ನಿಜಲಿಂಗಪ್ಪನವರಿಗೆ ತಾವೇ ಸ್ವತಃ ಎಣ್ಣೆ ಹಾಕಿ ಎರೆಯುತ್ತಿದ್ದರು. ಹೊಸ ಖಾದಿ, ಪಂಚೆ, ಸಿಲ್ಕಿ ನೆಹರು ಷರ್ಟು ಹೊಲಿಸಿಡುವುದನ್ನು ಮರೆಯುತ್ತಿರಲಿಲ್ಲ. ಬೇರೆ ಊರುಗಳಲ್ಲಿ ಅವರು ಹುಟ್ಟುಹಬ್ಬ ಮಾಡಿಸಿಕೊಳ್ಳುವುದು ಮುರಿಗೆಮ್ಮನವರಿಗೆ ಇಷ್ಟವಾಗುತ್ತಿರಲಿಲ್ಲ. ನಿಜಲಿಂಗಪ್ಪನವರ ಹುಟ್ಟುಹಬ್ಬವನ್ನು ಪ್ರತಿವರ್ಷ ಇಷ್ಟೆಲ್ಲಾ ಸಡಗರದಿಂದ ಮಾಡಿದರೂ ಮುರಿಗೆಮ್ಮನವರ ಹುಟ್ಟಿದ ದಿನಾಂಕ ಗೊತ್ತಿದ್ದೂ; 30–10–1910, ನಿಜಲಿಂಗಪ್ಪನವರೇ ಆಗಲಿ, ಮಕ್ಕಳೇ ಆಗಲಿ ಯಾರೂ ಅವರ ಹುಟ್ಟು ಹಬ್ಬ ಮಾಡಬೇಕೆಂದು ಯೋಚಿಸಲೂ ಇಲ್ಲ. ಮಾಡಲೂ ಇಲ್ಲ. ಈಗ ಯೋಚಿಸಿದಾಗ ಮಕ್ಕಳಿಗೆ ಬೇಜಾರಾಗುತ್ತದೆ.

ಆದರೆ ಮುರಿಗೆಮ್ಮನವರು ತಮ್ಮ ಕುಟುಂಬದವರ ಬಗ್ಗೆ ಎಷ್ಟು ಯೋಚಿಸುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆ. ಅವರು ಎದೆನೋವು ಎಂದು ಬೆಂಗಳೂರು ಆಸ್ಪತ್ರೆಯಲ್ಲಿ ಇದ್ದಾಗ ಅವರಿಗೆ ತಮ್ಮ ಸಾವು ಗೊತ್ತಿತ್ತೋ ಇಲ್ಲವೋ; ಹತ್ತಿರ ಇದ್ದ ಮಗಳಿಗೆ ಹೇಳಿದರು. ದೊಡ್ಡ ಮಗಳಿಗೆ ಈ ವಿಜಯ ದಶಮಿಗೆ 60 ವರ್ಷಗಳು ತುಂಬುತ್ತವೆ. ಅವಳ ಹುಟ್ಟು ಹಬ್ಬ ಮಾಡಿರಿ. ಒಂದು ಸೀರೆ ತಂದಿಡಿ ಎಂದು ಹೇಳಿ ಹಣಕ್ಕೆ ಏರ್ಪಾಡು ಮಾಡಿದರು. ಆಗಿನಿಂದ ಅಳಿಯಂದಿರ 60ನೇ ಹುಟ್ಟು ಹಬ್ಬ ಮಾಡದಿದ್ದರೂ ಎಲ್ಲಾ 6 ಜನ ಹೆಣ್ಣು ಮಕ್ಕಳ ಹುಟ್ಟುಹಬ್ಬವನ್ನು ತಾಯಿಯ ತೃಪ್ತಿಗಾಗಿ ವಿಜೃಂಭಣೆಯಿಂದ ಮಾಡಿದ್ದಾರೆ.

ಮುಖ್ಯಮಂತ್ರಿಯ ಪತ್ನಿಯಾಗಿ, ಮುರಿಗೆಮ್ಮನವರು ಪ್ರಯಣ ಮಾಡಿದ್ದು ಬಹಳ ಕಡಿಮೆ. ಮೊಮ್ಮಕ್ಕಳು ಹುಟ್ಟುವುದು ಇನ್ನೂ ಮುಗಿದಿರಲಿಲ್ಲ. ಸಂಸಾರದ ಜವಾಬ್ದಾರಿ ಎಲ್ಲಾ ಅವರದೇ. ಶ್ರೀ ಶೈಲಕ್ಕೆ ಹೊಸದಾಗಿ ರಸ್ತೆ

ಮಾಡಿಸಿದಾಗ, ನಿಜಲಿಂಗಪ್ಪನವರೂ, ಬ್ರಹ್ಮಾನಂದ ರೆಡ್ಡಿಯವರು ಕರ್ನಾಟಕ, ಆಂದ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ಇಬ್ಬರ ದಂಪತಿಗಳು ಶ್ರೀಶೈಲಕ್ಕೆ ಹೋಗುವುದೆಂದು ಮಾತಾಡಿ ಕೊಂಡಿದ್ದರಂತೆ ಮನೆಯಲ್ಲಿ ಮಗಳ ಹೆರಿಗೆ ಆಗಿದ್ದರಿಂದ ಮುರಿಗಮ್ಮನವರು ಹೋಗಲಿಲ್ಲ ಎಷ್ಟಾವಾಗಾದರೂ ಸಾಧ್ಯವಾದಾಗ ಹೋದರಾಯಿತ ಎಂದುಕೊಂಡಿದ್ದರಂತೆ. ಅದು ಸಾಧ್ಯವಾಗಲೇ ಇಲ್ಲ. ಪ್ರಯಾಣ ಮಾಡಲ ಅವರಿಗೆ ಮೊಣಕಾಲು ನೋವು ಬಹಳವಾಗಿತ್ತು. ಕೊನೆಗೆ ಮಕ್ಕಳ ಹತ್ತಿ ತಮ್ಮ ಅಪೇಕ್ಷೆ ಹೇಳಿಕೊಂಡರು. ಅಳಿಯನ ಅಂಬಸಿಡಾರ್ ಕಾರಿನಲ್ಲಿ ಮಕ್ಕ ಜೊತೆ ಹೋದರು. ಮುಖ್ಯಮಂತ್ರಿಗಳ ಪತ್ನಿಯಾಗಿದ್ದಾಗ, ಎಲ್ಲ ಅನುಕೂಲತೆಯಿಂದ ದೊಡ್ಡ ಕಾರಿನಲ್ಲಿ ಸೌಕರ್ಯವಾಗಿ ಹೋಗಬಹುದಿತ್ತು ಆಗ ಶ್ರೀಶೈಲದ ದೇವಸ್ಥಾನ ಇಷ್ಟು ದೊಡ್ಡದು ಕಟ್ಟಿರಲಿಲ್ಲ. ಜನಗಳೂ ಇಷ ಬರುತ್ತಿರಲಿಲ್ಲ. ಮುರಿಗೆಮ್ಮನವರಿಗೆ ಮಂಡಿನೋವು, ಕಷ್ಟ ಪಟ್ಟು ಕೆಳ ಕುಳಿತರು. ಭಟ್ಟರು ಮಂತ್ರಹೇಳಿ ಪೂಜೆಮಾಡಿಸಲು ಪ್ರಾರಂಭಿಸಿದರು ಶ್ರೀ ಶೈಲ ಮಲ್ಲಿಕಾರ್ಜುನನನ್ನು ಎಲ್ಲರೂ ಮುಟ್ಟಿ ಪೂಜೆ ಮಾಡಬಹುದು ಹೂವನ್ನಿಡುತ್ತಿರುವಾಗ ಇನ್ನೊಂದು ಭಕ್ತರ ಗುಂಪನ್ನು ಕರೆದುಕೊಂಡ ಬಂದು ಇನ್ನೊಬ್ಬ ಭಟ್ಟ ಮಂತ್ರ ಹೇಳುತ್ತಾ ಲಿಂಗದ ಮೇಲೆ ನೀರು ಹಾಕಿಸಿದ ಮುರಿಗೆಮ್ಮನವರಿಗೆ ವಿಪರೀತ ಸಿಟ್ಟು ಬಂದಿತು. ನನ್ನ ಪೂ ಮುಗಿಯುವವರೆಗೆ 5 ನಿಮಿಷ ತಡೆಯುವುದಕ್ಕೆ ಆಗುವುದಿಲ್ಲವೇ; ನಿಮ ನನ್ನ ಪೂಜೆ ಆಗುವವರೆಗೆ ದೂರ ನಿಲ್ಲು. ನಿಮ್ಮಂತಹವರ ಕೈಲಿ ದೇವರ ಸಿಕ್ಕು ಪಿಲಿ ಪಿಲಿ ಒಡ್ಡಾಡುತ್ತಾನೆ ಎಂದರು ಎತ್ತರದ ದನಿಯಲ್ಲಿ. ಅವರ ಪೂ ಮುಗಿಯುವವರೆಗೆ ಯಾರೂ ಹತ್ತಿರ ಬರುವ ಧೈರ್ಯ ಮಾಡಲಿಲ್ಲ.

ಇನ್ನೊಮ್ಮೆ ಹುಬ್ಬಳ್ಳಿಗೆ ಬಂದಾಗ ಉಳವಿ ಚನ್ನಬಸವಣ್ಣನ ಜಾತ್ರೆ ಇದ್ದಿತ ಹೋಗುವುದೆಂದು ತೀರ್ಮಾನಿಸಿದ್ದರು. ಆಗ ಅಲ್ಲೆಲ್ಲಾ ಕಾಲರ ಇದ್ದುದರಿಂದ ನೀರು ಮತ್ತು ಊಟಕ್ಕೆ ಮನೆಯಿಂದ ತೆಗೆದುಕೊಂಡ ಹೊರಟರು. ದೇವಸ್ಥಾನ ಇನ್ನೊಂದೆರಡು ಮೈಲಿ ಇರುವಾಗ ದಾರಿಗೆ ಅ

ಗಳಗಳನ್ನು ಹಾಕಿದ್ದರು. ಅಲ್ಲಿ ಕಾಲರಾ ಇನಾಕ್ಯುಲೇಶನ್ ಮಾಡಿಸಿಕೊಂಡೇ ಹೋಗಬೇಕೆಂದೂ ಇಲ್ಲದಿದ್ದರೆ ಬಿಡುವುದಿಲ್ಲವೆಂದು ಹೇಳಿದರು ನಾವು ಅಲ್ಲಿ ನೀರನ್ನೂ ಕುಡಿಯುವುದಿಲ್ಲ ಊಟವನ್ನೂ ಮಾಡುವುದಿಲ್ಲ ಎಂದು ಹೇಳಿದರೂ ಕೇಳಲಿಲ್ಲ. ಆ ಸಿಬ್ಬಂದಿ, ಆ ಸೂಜಿ ನೋಡಿ ಯಾರಿಗೂ ಇಂಜಕ್ಷನ್ ಮಾಡಿಸಿಕೊಳ್ಳುವ ಮನಸ್ಸಾಗಲಿಲ್ಲ. ಮುರಿಗಮ್ಮನವರು ದೇವರಿಗೆ ನಮ್ಮಿಂದ ದರ್ಶನ ಮಾಡಿಸಿಕೊಳ್ಳುವುದು ಬೇಡವಾಗಿದೆ. ಏನುಮಾಡುವುದು ವಾಪಸ್ಸು ಹೋಗೋಣ ಎಂದರು. ಕಾರು ವಾಪಸ್ಸು ಅರ್ಧ ಮೈಲಿ ಹೋಗುವುದರೊಳಗೆ ಪರಿಚಯದ ಪಿ.ಡಬ್ಲ್ಯೂ.ಡಿ. ಇಂಜನಿಯರ ಕಾರು ಎದುರಿಗೆ ಬಂದಿತು. ಇಷ್ಟು ಬೇಗ ವಾಪಸ್ಸು ಹೊರಟಿದ್ದೀರಲ್ಲ ಎಂದು ಕೇಳಿದರು. ವಿಷಯ ತಿಳಿದು, ನೀವು ಸುಮ್ಮನೆ ನಮ್ಮ ಕಾರಿನ ಹಿಂದೆ ಬನ್ನಿ ಎಂದು ತಮ್ಮ ಕೆಲಸದವರಿದ್ದ ಜೀಪನ್ನು ಮುಂದೆ ಕಳಿಸಿದರು. ಐದು ನಿಮಿಷ ಬಿಟ್ಟು ನಾವು ಹೋದಾಗ ಅಡ್ಡ ಗಳಗಳನ್ನೆಲ್ಲಾ ತೆಗೆದುಹಾಕಿ ಸಿಬ್ಬಂದಿ ದೂರ ಹೋಗಿ ನಿಂತಿದ್ದರು. ಮುರಿಗಮ್ಮನವರು ಅಧಿಕಾರದ ಮಹಿಮೆ ಹೇಗಿದೆ ಎಂದು ನಕ್ಕರು. ಅವರು ತಮಗನಿಸಿದ್ದನ್ನು ನೇರವಾಗಿ, ನಿಷ್ಠುರವಾಗಿದ್ದರೂ ಹೇಳುವವರು. ಯಾರನ್ನಾದರೂ ಸಂತೋಷ ಪಡಿಸಲಿಕ್ಕಾಗಿ, ತಮ್ಮ ಮನಸ್ಸಿಗೆ ಬೇಡವಾದುದನ್ನು ಹೇಳುತ್ತಿರಲಿಲ್ಲ.

ವ್ಯಕ್ತಿತ್ವ : ಮುರಿಗೆಮ್ಮನವರದು ಗಿಡ್ಡ ದೇಹ. ಸಾಧಾರಣ ಬೆಳ್ಳಗಿದ್ದರು. ಅವರ ಮದುವೆಯಲ್ಲಿ ತೆಳ್ಳಗಿದ್ದರೆಂದು ನಂಬುವುದು ಕಷ್ಟ. ಮದುವೆಯ ಫೋಟೋದಲ್ಲಿ ಇಬ್ಬರೂ ತೆಳ್ಳಗಿದ್ದಾರೆ. ಮಕ್ಕಳಿಗೆ ನೆನಪಿರುವುದು. ಸ್ಥೂಲಕಾಯದ ಬಿಳಿ ಖಾದಿ ಸೀರೆ ಉಡುತ್ತಿದ್ದ ಅವ್ವಯ್ಯನೇ. ಅವರನ್ನು ಮಕ್ಕಳೆಲ್ಲಾ ಅವ್ವ ಅವ್ವಯ್ಯ ಎಂದೇ ಕರೆಯುತ್ತಿದ್ದರು. ತಂದೆಯನ್ನು ಅಪ್ಪಾ, ಅಪ್ಪಯ್ಯರು ಎನ್ನುತ್ತಿದ್ದರು.

ಮುರಿಗೆಮ್ಮನವರು ಮಕ್ಕಳು ಸಣ್ಣವರಿದ್ದಾಗ ಹೆಚ್ಚು ನೋಡಿಕೊಳ್ಳುವುದಕ್ಕೆ ಸಾಧ್ಯವಾಗದಿದ್ದರೂ, ತಮಗೆ ಮಕ್ಕಳಾಗುವುದು ನಿಂತಮೇಲೆ, ಅಂದರೆ 1947ರ ನಂತರ ಎಲ್ಲಾ ಮಕ್ಕಳ ಬಗ್ಗೆ ಕಾಳಜಿ ಸಹಿಸುತ್ತಿದ್ದರು. ಆಗ ದೊಡ್ಡ

ಮಗಳ ಮದುವೆ ಆಗಿ, ಇಬ್ಬರು ಮಕ್ಕಳಾಗಿದ್ದವು. ಆಗ ಚಿತ್ರದುರ್ಗದಲ್ಲಿ ಕಾಲೇಜಿರಲಿಲ್ಲ. ದೊಡ್ಡ ಮಗ ಉಮಾಕಾಂತ ಬೆಂಗಳೂರಿಗೆ ಓದಲು ಹೋಗಿದ್ದ.

ಮಕ್ಕಳ ಓದಿನಲ್ಲಿ, ಸ್ನಾನಪಾನಗಳಲ್ಲಿ ಆಟಪಾಟಗಳಲ್ಲಿ ಆಸಕ್ತಿ ವಹಿಸಲು ಅವರಿಗೆ ಪುರುಸೊತ್ತೇ ಇರುತ್ತಿರಲಿಲ್ಲ. ಯಾವಾಗಲೂ ಕೆಲಸ ಕೆಲಸ ನಿಜಲಿಂಗಪ್ಪ ಜೈಲಿಗೆ ಹೋದ ಮೇಲೆ ಎಲ್ಲಾ ಮನೆ ಮಕ್ಕಳ ಜವಾಬ್ದಾರಿ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಲು ಬಹಳ ಹೆಣಗಾಡುತ್ತಿದ್ದರು.

ಆಗ ಎಲ್ಲರೂ 16 ಮೊಳದ ಸೀರೆ ಉಟ್ಟು ನೆರಿಗೆ ಸೀರೆಯನ್ನು ಸಿಕ್ಕಿಸಿ ಕೊಂಡರೆ, ಅದು ಬಾಳೆ ಕಾಯಿ ಆಕಾರ ಆಗುತ್ತಿತ್ತು. ಸೀರೆ ಉಡುತ್ತಿದ್ದುದೇ ಹೀಗೆ. ಆ ಬಾಳೆಕಾಯಿಯಲ್ಲಿ ಬೀಗದ ಕೈ ಗೊಂಚಲು ರುಪಾಯಿ ನಾಣ್ಯಗಳನ್ನು ಸಿಕ್ಕಿಸಿ ಕೊಳ್ಳುತ್ತಿದ್ದರು. ರವಿಕೆಗಳೂ ಈಗಿನಂತೆ ಮ್ಯಾಚಿಂಗ್ ಇರಲಿಲ್ಲ. ಅಳತೆ ಕೊಟ್ಟೂ ಹೊಲಿಸುತ್ತಿರಲಿಲ್ಲ. ದರ್ಜಿ ಹೊಲಿದಂತೆ ಹೊಲಿದ ಮೇಲೆ ಹಿಡಿದುಕೊಂಡೋ ಹೊಲಿಗೆ ಬಿಚ್ಚಿಕೊಂಡೋ ಉಪಯೋಗಿಸುತ್ತಿದ್ದರು. ರವಿಕೆಗಳು ಸೊಂಟಕ್ಕಿಂತ ಕೆಳಗಿನವರೆಗೆ ಇದ್ದು ಹೊಟ್ಟೆ ಸೊಂಟ ಕಾಣಿಸುತ್ತಿರಲಿಲ್ಲ. ರೇಷ್ಮೆಸೀರೆ ಉಟ್ಟ ಮುರಿಗೆಮ್ಮನವರಿಗೆ ನಿಜಲಿಂಗಪ್ಪನವರು ಜೈಲಿಗೆ ಹೋದ ಮೇಲೆ ದಪ್ಪ ಖಾದಿಸೀರೆ ಉಡುವುದು ಕಷ್ಟವಾಗಿರಬೇಕು. ಮನೆಯಲ್ಲಿ ಖಾದಿಬಟ್ಟೆ ಬಿಟ್ಟು ಬೇರೆ ಬಟ್ಟೆ ಹುಡುಕಿದರೂ ಸಿಗುತ್ತಿರಲಿಲ್ಲ. ಖಾದಿ ಸೀರೆ ಭಾರ, ಒರಟು, ಧೂಳು ಮೆತ್ತಿಕೊಳ್ಳುತ್ತಿತ್ತು ಉಡಲೂ ಕಷ್ಟ; ಒಗೆಯಲು ಸೋಪು ನೀರು ಜಾಸ್ತಿ ಬೇಕು. ಗೋಣಗಿಕೊಂಡ ತಾವೇ ಒಗೆದುಕೊಳ್ಳುತ್ತಿದ್ದರು.

ಮುರಿಗೆಮ್ಮನವರು ಪತಿಗೆ ರಾಯರು ಎನ್ನುತ್ತಿದ್ದರು. ಕಕ್ಷಿಗಾರರೆಲ್ಲಾ ಹಾಗೆ ಅನ್ನುತ್ತಿದ್ದುದರಿಂದ ಇರಬೇಕು. ಸಾಧಾರಣ ಮನೆತನದಲ್ಲಿ ಹುಟ್ಟಿ ಬಡ

ವಿದ್ಯಾವಂತ ಗಂಡನ ಕೈಹಿಡಿದು ಗಂಡನ ಮನೆಗೆ ಬಂದರು. ಲಾಯರ ಪತ್ನಿಯಾಗಿ, ರಾಜಕಾರಣಿಯ ಪತ್ನಿಯಾಗಿ, ಕ್ರಮೇಣ ಹೊರಜಗತ್ತಿ

ಅರಿವಾಯಿತು. ಅಲ್ಲಿಯವರೆಗೆ ಅಡಿಗೆ, ಊಟ, ಒಡವೆ - ವಸ್ತ್ರ, ಗಂಡ-ಮಕ್ಕಳು ಇವೇ ಅವರ ಜಗತ್ತಾಗಿತ್ತು. ನಿಜಲಿಂಗಪ್ಪನವರು ಜೈಲಿಗೆ ಹೋದ ನಂತರ ಹೊರ ಜಗತ್ತಿನ ಅರಿವಾಗತೊಡಗಿತು. ಬೆಂಗಳೂರು ದೆಹಲಿಗೆ ಹೋದ ಮೇಲೆ ವಿಶಾಲ ಜಗತ್ತಿನ ಆಗುಹೋಗುಗಳ ತಿಳುವಳಿಕೆ ಬಂದಿತು. ಮಕ್ಕಳಿಂದಲೂ ಮೊಮ್ಮಕ್ಕಳಿಂದಲೂ ಕಲಿತರು. ಒಂದೆರಡು ಮಕ್ಕಳನ್ನು ಪಡೆದು, ಸಾಕಲು ಒದ್ದಾಡುತ್ತಿರುವ ಈಗಿನ ತಾಯಂದಿರಿಗೆ, ಆರ್ಥಿಕ ಪರಿಸ್ಥಿತಿ ಕಷ್ಟಕರವಾಗಿರುವಾಗ 9 ಮಕ್ಕಳನ್ನು ಸಾಕುವುದು, ಸಂಸಾರ ನಿಭಾಯಿಸುವುದು ಎಷ್ಟು ಕಷ್ಟ ಎಂದು ಅರ್ಥವಾಗುವುದು ಸಾಧ್ಯವಿಲ್ಲ.

ಮುರಿಗೆಮ್ಮನವರು ಯಾವಾಗಲೂ ಶಿಸ್ತಾಗಿ ನೀಟಾಗಿರುತ್ತಿದ್ದರು. ಸಾಯಂಕಾಲ ಮುಖ ತೊಳೆದುಕೊಂಡು ತಲೆಬಾಚಿಕೊಂಡು ಸ್ನೋ ಪೌಡರ್ ಕಣ್ಣುಕಪ್ಪು ಹಚ್ಚಿ ಕೊಳ್ಳುತ್ತಿದ್ದರು. ಖಾದಿಯ ಸೀರೆಗಳು ಯಾವಾಗಲೂ ಶುಭ್ರವಾಗಿ ಬೆಳ್ಳಗೆ ಇರುತ್ತಿದ್ದವು. ಕಾಂಪೌಂಡಿನಲ್ಲಿ ಬಿಡುವ ಮಲ್ಲಿಗೆ, ಜಾಜಿ, ಸುಗಂಧರಾಜ, ಶೇವಂತಿಗೆ ಮೊದಲಾದ ಹೂವುಗಳನ್ನು, ಮೊಗ್ಗುಗಳನ್ನು ಕಿತ್ತಿಸಿ ತರಿಸಿ ಅವುಗಳನ್ನು ಕಲಾತ್ಮಕವಾಗಿ ಪೋಣಿಸಿ ಅಥವಾ ದಾರದಲ್ಲಿಕಟ್ಟಿ ಮುಡಿದುಕೊಳ್ಳುತ್ತಿದ್ದರು. ಯಾವಾಗಲೂ ಒಂದೆರಡು ಬಂಗಾರದ ಸರಗಳನ್ನು ಹಾಕಿಕೊಳ್ಳುತ್ತಿದ್ದರು. ಮೂರು ಜೊತೆ ಬಂಗಾರದ ಬಳೆಗಳನ್ನು ಮಧ್ಯ ಗಾಜಿನ ಬಳೆಗಳನ್ನು ಹಾಕಿಕೊಳ್ಳುತ್ತಿದ್ದರು. ಗಾಜಿನ ಬಳೆ ಸವೆಯುತ್ತವೆ ಎಂದು ಪ್ರತಿ ತಿಂಗಳು ಬದಲಾಯಿಸಿ ಹೊಸ ಬಳೆ ಹಾಕಿಕೊಳ್ಳುತ್ತಿದ್ದರು. ಮುಖ್ಯಮಂತ್ರಿಗಳಾದಾಗ ಕೊಟ್ಟ ಸುವಾಸಿತ ತೈಲಗಳು ಸಾಕಷ್ಟು ಇದ್ದವು. ದಿನಾ ಅವನ್ನು ಉಪಯೋಗಿಸುತ್ತಿದ್ದರು. ಕೆಲಸವೆಲ್ಲಾ ಮುಗಿದ ಮೇಲೆ ಒಳಗಿನ ಮರಾಂಡಾದಲ್ಲಿದ್ದ ದಿಂಬು ಹಾಕಿದ್ದ ಬೆತ್ತದ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಮಕ್ಕಳೆಲ್ಲಾ ಓ! ನಮ್ಮವ್ವ ಸಿಂಹಾಸನ ಏರಿದಳು ಎಂದು

ತಮಾಷೆ ಮಾಡುತ್ತಿದ್ದರು. ಅಲ್ಲಿಂದಲೇ ಮನೆಯ ಆಗುಹೋಗುಗಳನ್ನು ಗಮನಿಸುತ್ತಿದ್ದರು. ಯಾರಾದರೂ ಪರಿಚಯದವರು ಬಂದು

ನಿಜಲಿಂಗಪ್ಪನವರನ್ನು ಮಾತ್ರ ಮಾತನಾಡಿಸಿ ಹೋದರೆ, ಹ್ಲೂ
ಈಗ ನನ್ನ ಹತ್ತಿರ ಅವರದೇನು ಕೆಲಸ. ರಾಯರ ಹತ್ತಿರ ಕೆಲಸ
ಆಗಬೇಕಾಗಿದ್ರೆ ಮಾಡಿಸಿಕೊಂಡು ಹೋಗುತ್ತಾರೆ ಎಂದು ಒಮ್ಮೊಮ್ಮೆ
ಬೇಜಾರುಪಟ್ಟುಕೊಳ್ಳುತ್ತಿದ್ದರು. ಕೆಲವು ಸಲ ನಗುತ್ತಿದ್ದರು. ಧ್ವನಿಯ
ಮೇಲೆಯೇ ಬಂದವರಾರೆಂದು ಅವರಿಗೆ ತಿಳಿಯುತ್ತಿತ್ತು.

ರಜಾದಿನಗಳಲ್ಲಿ ಚಿತ್ರದುರ್ಗಕ್ಕೆ ಬೆಂಗಳೂರಿಗೆ 8–10 ಮೊಮ್ಮಕ್ಕಳ
ಬರುತ್ತಿದ್ದರು ಪ್ರತಿ ವಾರ ಎಣ್ಣೆ ಹಾಕಿತಿಕ್ಕಿ ಬಿಸಿನೀರು ಹಾಕಿ ಎಲ್ಲರಿಗೂ
ತಲೆಸ್ನಾನ ಮಾಡಿಸುತ್ತಿದ್ದರು. ಅವರಿಗೆ ಅಷ್ಟು ಶಕ್ತಿ ಹೇಗಿತ್ತೋ ಎನಿಸುತ್ತದ
ಅವರವರಿಗೆ ಇಷ್ಟವಾದ ತಿಂಡಿ ಎಲ್ಲಾ ಮಾಡಿಕೊಡುತ್ತಿದ್ದರು
ನಿಜಲಿಂಗಪ್ಪನವರ ಸುತ್ತಲೇ ಅವರ ಜೀವನ. ಅವರು ಊರಿಗೆ ಹೋ
ಬರುತ್ತಾರೆ ಎಂದರೆ ಅವರ ರೂಮು, ಸಾಮಾನುಗಳನ್ನೆಲ್ಲಾ ಧೂಳು ಒರೆ
ಸ್ವಚ್ಛಮಾಡಿ ಇಡುತ್ತಿದ್ದರು. ರಾಯರು ಬರುತ್ತಾರೆ ಎನ್ನುವುದು ಯಾವಾಗಲ
ಅವರಿಗೆ ಸಂಭ್ರಮದ ವಿಷಯವೇ. ಎದೆನೋವಿರಲಿ, ಮೊಣಕಾಲ
ನೋವಿರಲಿ, ಯಾರ ಹತ್ತಿರವೂ ಹೇಳುತ್ತಿರಲಿಲ್ಲ; ಕೊರಗುತ್ತಿರಲಿಲ್ಲ. ಅವರನ
ನೋಡಿ ಮಕ್ಕಳು ಮೊಮ್ಮಕ್ಕಳು ಕಷ್ಟ ಸಹಿಷ್ಣತೆಯ ಪಾಠವನ್ನು ಕಲಿತಿದ್ದರು
ರಾಯರನ್ನು ಯಾವಾಗಲೂ ಗೌರವಾನ್ವಿತ ಅತಿಥಿಯಂತೆ ಮನೆಯವರೆಲ
ನೋಡಿಕೊಳ್ಳುತ್ತಿದ್ದರು. ಅವರಿಗೂ ಮಾಡಿಸಿಕೊಂಡು ರೂಢಿಯಾಗಿತ್ತು.

1963ರಲ್ಲಿ ರಕ್ಷಣಾ ನಿಧಿಗೆ ಬಂಗಾರ ಕೊಡಿ ಎಂದು ಸರ್ಕಾ
ಮನವಿಮಾಡಿಕೊಂಡಿತ್ತು. ಮುರಿಗೆಮ್ಮನವರು ತಮ್ಮ 2 ಬಂಗಾರ
ಬಳೆಗಳನ್ನು ತೆಗೆದುಕೊಟ್ಟರು. ಅವರನ್ನು ನೋಡಿ ಮನೆಯ ಮಕ್ಕಳ
ಸ್ನೇಹಿತರೂ ಬಂಗಾರ ಕೊಟ್ಟರು. ದೇಶಕ್ಕಾಗಿ ಬಂಗಾರ ಕೊಡುವ ಮನಸ
ಮೊದಲು ಮಾಡಿದವರು ಅವರೇ. ಮುರಿಗೆಮ್ಮನವರು ಆರೋ
ಚೆನ್ನಾಗಿರುವಾಗಲೇ ತಮ್ಮ ಹೆಣ್ಣು ಮಕ್ಕಳಿಗೆ ಏನೇನು ಒಡವೆ ಕೊಡಬೇಕೆಂ
ನಿರ್ಧರಿಸಿ ಎಲ್ಲರಿಗೂ ಹೇಳಿದ್ದರು. ಉಳಿದದ್ದನ್ನೆಲ್ಲಾ ಮದುವೆಯಾಗಿದ್ದ ಮ

ಸೊಸೆ ಕೊಟ್ಟಿದ್ದರು. ಯಾವ ಬೇಧ ಭಾವವೂ ಇಲ್ಲದಂತೆ ಅವರಲ್ಲಿ ಮನಸ್ತಾಪ ಬಾರದಂತೆ ಹಂಚಿದ್ದರು.

ಮುರಿಗಮ್ಮನವರಿಗೆ ಸಣ್ಣವರಿದ್ದಾಗಿನಿಂದಲೂ ದೃಷ್ಟಿದೋಷ ಇದ್ದಿತು. ಏನನ್ನಾದರೂ ನೋಡಿದಾಗ ಅಕ್ಕ ಪಕ್ಕದವು ಕಾಣುತ್ತಿರಲಿಲ್ಲ ದೃಷ್ಟಿ ಕ್ರಮೇಣ ಮಂದವಾಗುತ್ತಾ ಬಂದಿತು. ಅಲ್ಲದೆ ಅವರ ಕಣ್ಣಿನ ನರಗಳು ದುರ್ಭಲವಾಗಿದ್ದವು. ಏನೂ ಮಾಡುವುದಕ್ಕೆ ಬರುವುದಿಲ್ಲ ಎಂದು ಡಾಕ್ಟರು ಹೇಳಿದರು. ಆದರೂ ಮನೆಯ ಎಲ್ಲಾ ಕೆಲಸಗಳನ್ನೂ ನಿಭಾಯಿಸುತ್ತಿದ್ದರು. ನಿಜಲಿಂಗಪ್ಪನವರ ಎಲ್ಲಾ ಕೆಲಸಗಳನ್ನೂ ತಪ್ಪದೆ ಮಾಡುತ್ತಿದ್ದರು. ಕೊನೆಯ 8–10 ವರ್ಷ ಮುರಿಗೆಮ್ಮನವರನ್ನು ಅಡಿಗೆ ಮನೆಗೆ ಬಿಡುತ್ತಿರಲಿಲ್ಲ. ಏನಾದರೂ ವಿಶೇಷ ಅಡಿಗೆ ಮಾಡುವಾಗ ಅಲ್ಲೇ ಹತ್ತಿರ ಕುರ್ಚಿಯಲ್ಲಿ ಕುಳಿತು ಸೂಚನೆ ಕೊಡುತ್ತಿದ್ದರು. ಹುರಿಯುವುದಿದ್ದಾಗ ವಾಸನೆಯ ಮೇಲಿಂದಲೇ ಇನ್ನಷ್ಟು ಹುರಿ, ಸಾಕು ಎಂದು ಹೇಳುತ್ತಿದ್ದರು. ಧ್ವನಿಯ ಮೇಲಿಂದಲೇ ಯಾರೂ ಎಂದು ಗುರುತು ಹಿಡಿಯುತ್ತಿದ್ದರು. ಸ್ಪರ್ಷ ಜ್ಞಾನ ಚೆನ್ನಾಗಿತ್ತು. ಕಿವಿ, ಮೂಗು ಸಹ ಯಾವುದಾದರೂ ಸಮಾರಂಭಕ್ಕೆ ಹೋಗುವುದಿದ್ದರೆ, ಈ ಬಣ್ಣದ ಈ ಅಂಚಿನ ಸೀರೆ ಕೊಡು, ಈ ಸರ ಕೊಡು ಎಂದು ಕೇಳಿ ತೆಗೆಸಿಕೊಳ್ಳುತ್ತಿದ್ದರು. ಸ್ಟೋರು ರೂಮಿನಲ್ಲಿ–ಅಡಿಗೆ ಮನೆಯಲ್ಲಿ ಸಾಮಾನಿಡುವ ಡಬ್ಬಗಳ ಮೇಲೆ ಕೈ ಆಡಿಸಿ, ಧೂಳೇ ಒರೆಸಿಲ್ಲ ಎಂದು ನಿಂತು ಒರೆಸುವುದಕ್ಕೆ ಹೇಳುತ್ತಿದ್ದರು. ನೆಲವನ್ನು ಕಾಲಿನಿಂದ ಸವರಿ ಏಕೆ ಇವತ್ತು ನೆಲ ಒರೆಸಿಲ್ಲ ಎಂದು ನಿಂತು ತೊಳೆಸುತ್ತಿದ್ದರು. ಚೆನ್ನಾಗಿದೃಷ್ಟಿಯಿದ್ದಾಗ ಮಾಡಿಸುವ ಕೆಲಸಗಳನ್ನೆಲ್ಲಾ ಈ ಪರಿಸ್ಥಿತಿಯಲ್ಲೂ ಮಾಡಿಸುತ್ತಿದ್ದರು.

1977ನೇ ಮೇ 25ಕ್ಕೆ ಅವರ ಮದುವೆ ಆಗಿ 50 ವರ್ಷಗಳಾಗುತ್ತಿದ್ದವು. ತಮ್ಮ ಜೊತೆಗೇ ಮದುವೆ ಆದ ಅವರ ಅಣ್ಣ ಮತ್ತು ಅತ್ತಿಗೆಯರನ್ನು ದಾವಣಗೆರೆಯಿಂದ ಕರೆಸಿ, ನಾಲ್ಕು ಜನರದೂ ಸಮಾರಂಭ ಮಾಡಿಸಿದರು. ಎಲ್ಲಾ ಮಕ್ಕಳೂ ಮೊಮ್ಮಕ್ಕಳೂ ಸ್ನೇಹಿತರೂ ಬಂಧೂಗಳೂ, ಎಲ್ಲರೂ ಸೇರಿ

ವಿಜೃಂಭಣೆಯಿಂದ ಆಚರಿಸಿದರು. ಆಗ ಮುರಿಗಮ್ಮನವರ ಕಣ್ಣಿನ ದೃಷ್ಟಿ ಸುಮಾರಾಗಿ ಕಾಣುತ್ತಿತ್ತು. ಮುಂದೆ ಹತ್ತು ವರ್ಷಕ್ಕೆ ಅಂದರೆ 1987ನೇ ಮೇ 25ಕ್ಕೆ 60ನೇ ವಾರ್ಷಿಕೋತ್ಸವವನ್ನು ಎಲ್ಲರೂ ಸೇರಿ ಏರ್ಪಡಿಸಿದರು. ಆಗ ಅಣ್ಣ ಮುರಿಗಪ್ಪನವರು ಇರಲಿಲ್ಲ. 2–3 ವರ್ಷಗಳಿಂದ ಮುರಿಗೆಮ್ಮನವರಿಗೆ ಕಣ್ಣಿನ ದೃಷ್ಟಿ ಕಾಣಿಸುತ್ತಿರಲಿಲ್ಲ. ಸಮಾರಂಭಕ್ಕೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಸ್ನೇಹಿತರು, ಬೀಗರು, ಬಂಧುಗಳು ಊರಿನವರು ಎಲ್ಲರೂ ಸೇರಿದ್ದರು. ಮದುವೆಯಾಗಿ 60 ವರ್ಷ ಇಬ್ಬರೂ ಅಲ್ಲದೆ ಹುಟ್ಟಿದ ಮಕ್ಕಳು ಮೊಮ್ಮಕ್ಕಳು ಎಲ್ಲರೂ ಜೀವಿಸಿರುವುದೂ ಒಂದು ವಿಶೇಷವೇ. ನಿಜಲಿಂಗಪ್ಪನವರ ತಾಯಿ ನೀಲಮ್ಮನವರ ಸಾವನ್ನು ಮಾತ್ರ ಕಂಡಿದ್ದರು. ನೀಲಮ್ಮನವರಿಗೂ ಆಗ 83 ವರ್ಷ ಆಗಿತ್ತು.

ಎಲ್ಲರೂ ಸೇರಿದ್ದೀರಿ. ನನಗೆ ಒಬ್ಬರನ್ನೂ ನೋಡುವಂತಿಲ್ಲ. ಏನು ಪಾಪ ಮಾಡಿದ್ದೆ? ದೇವರೇಕೆ ನನ್ನ ಕಣ್ಣು ದೃಷ್ಟಿ ಕಿತ್ತುಹಾಕಿದ ಎಂದು ಬಹಳ ಬೇಜಾರು ಪಟ್ಟುಕೊಳ್ಳುತ್ತಿದ್ದರು. ಅದೇ ಮನೋವ್ಯಥೆಯಾಯಿತು.

ನಿಜಲಿಂಗಪ್ಪನವರು ಇಬ್ಬರು ಮಕ್ಕಳು ಸೇರಿ ಮದ್ರಾಸಿಗೆ ಅವರನ್ನು ಕಣ್ಣು ತೋರಿಸಲು ಕರೆದುಕೊಂಡು ಹೋದರು. ಅಲ್ಲಿ ಶಂಕರ ನೇತ್ರಾಲಯದ ಡಾಕ್ಟರು ನಿಜಲಿಂಗಪ್ಪನವರ ಸ್ನೇಹಿತರು; ಎಲ್ಲಾ ಪರೀಕ್ಷಿಸಿ ನೋಡಿ, ಮುರಿಗೆಮ್ಮನವರೆದುರಿಗೆ, ದೃಷ್ಟಿಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ, ಸಾರಿ ಎಂದು ಕನ್ನಡದಲ್ಲಿಯೇ ಹೇಳಿದರು. ಸ್ವಲ್ಪ ಬೆಳಕಾದರೂ ಕಾಣುವಂತೆ ಆಗಬಹುದೇನೋ ಎನ್ನುವ ನಿರೀಕ್ಷೆಯಲ್ಲಿ ಮುರಿಗಮ್ಮನವರು ಹೋಗಿದ್ದರು. ಡಾಕ್ಟರು ಹೇಳಿದ್ದನ್ನು ಕೇಳಿ ತೀರಾ ನಿರಾಶೆಯಾಯಿತು. ಆಗಿನಿಂದ ನಾನು ಏಕೆ ಜೀವಿಸಬೇಕು ಎನ್ನುವುದೇ ಯೋಚನೆ ಆಯಿತು; ಮಾತಾಡುವುದನ್ನು ಕಡಿಮೆ ಮಾಡಿದರು. ನಗುವುದನ್ನು ಬಿಟ್ಟರು. ಮಕ್ಕಳೆಲ್ಲಾ ಬಂದು ಜೊತೆಗಿದ್ದು ಜೀವನದಲ್ಲಿ ಆಸಕ್ತಿ ಉತ್ಸಾಹ ಮರುಕಳಿಸುವಂತೆ ಮಾಡಲು ಪ್ರಯತ್ನ ಪಟ್ಟರು.

1988 ನೇ ಗೌರಿ ಗಣೇಶ ಹಬ್ಬದಲ್ಲಿ ಎಲ್ಲಾ ಹೆಣ್ಣುಮಕ್ಕಳು ಸೊಸೆಯರೂ ಚಿತ್ರದುರ್ಗಕ್ಕೆ ಬಂದಿದ್ದರು. ಮುರಿಗೆಮ್ಮನವರಿಗೆ ಏನನ್ನಿಸಿತೋ, ಮಕ್ಕಳನ್ನು ಕರೆದು ಹೇಳಿದರು. ಹೆಣ್ಣು ಮಕ್ಕಳೂ ಸೊಸೆಯೂ ತೌರುಮನೆಗೆ ಗೌರಿ ಹಬ್ಬಕ್ಕೆ ಬಂದಿದ್ದೀರಿ ಎಲ್ಲರಿಗೂ ಸೀರೆ ಕೊಡಿಸಬೇಕು ಎನಿಸುತ್ತಿದೆ. ಏನು ಮಾಡಲಿ ನನ್ನ ಹತ್ತಿರ ಅಷ್ಟು ಹಣ ಇಲ್ಲ. ಎಲ್ಲರೂ ಒಂದೊಂದು ಬ್ಲೌಸ್ ಫೀಸ್ ತೆಗೆದುಕೊಳ್ಳಿರಿ ಎಂದು ಹೇಳಿ ಮುನ್ನೂರುಪಾಯಿ ಕೊಟ್ಟರು. ನಾಲ್ಕು ಸಲ ಮುಖ್ಯಮಂತ್ರಿಯ ಹೆಂಡತಿಯಾಗಿದ್ದವರು. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಪತ್ನಿಯಾಗಿದ್ದವರು, ಅವರ ಹತ್ತಿರ ಹಬ್ಬ ಹರಿದಿನಗಳಲ್ಲಿ ಮೊಮ್ಮಕ್ಕಳನ್ನು, ಸೊಸೆಯರನ್ನು ಸಂಭ್ರಮಿಸುವಷ್ಟು ಹಣ ಇಲ್ಲದೆ ಹೋಗಿತ್ತು. ಅವರಿಗೆ ಎಷ್ಟು ಬೇಜಾರಾಗಿತ್ತೋ. ಹಬ್ಬ ಮುಗಿಸಿ ಎಲ್ಲಾ ಅವರವರ ಊರಿಗೆ ಹೋದರು.

ಮುಂದೆ ಕೆಲವು ದಿನಗಳಲ್ಲೇ ಮುರಿಗೆಮ್ಮನವರಿಗೆ ಎದೆ ನೋವು ಬಂದಿತು. ಡಾಕ್ಟರು ಬಂದು ಇ.ಸಿ.ಜಿ. ತೆಗೆದು ಇಂಜಕ್ಷನ್ ಕೊಟ್ಟರು. ಎದೆ ನೋವು ಬಹಳ ಆದಾಗ ತೆಗೆದುಕೊಳ್ಳಿ ಎಂದು ಕೆಲವು ಮಾತ್ರೆ ಕೊಟ್ಟರು. ನೋವು ಬಹಳ ಬರುತ್ತಲೇ ಇತ್ತಂತೆ. ರಾತ್ರಿಯೆಲ್ಲಾ ತಾವೇ ಮಾತ್ರೆ ತೆಗೆದುಕೊಳ್ಳುತ್ತಿದ್ದರು. ಮನೆಯಲ್ಲಿ ಹೆಂಗಸರು ಬೇರೆ ಯಾರೂ ಇರಲಿಲ್ಲ. ಹುಬ್ಬಳ್ಳಿಯಿಂದ ಮಗಳು, ದೊಡ್ಡ ಮೊಮ್ಮಗ ಡಾಕ್ಟರು ಇದ್ದ; ಅವನೂ ಬಂದರು. ಮತ್ತೆ ಇ.ಸಿ.ಜಿ ತೆಗೆದರು. ಮತ್ತೆ ಹಾರ್ಟ್ ಅಟ್ಯಾಕ್ ಆಗಿದೆ ಮಲಗಿದಲ್ಲಿಂದ ಎಬ್ಬಿಸಬಾರದು ಎಂದರು. ಮುರಿಗೆಮ್ಮನವರು ಸ್ವತಂತ್ರ ಮನೋವೃತ್ತಿಯುವರು. ಯಾರ ಕೈಲೂ ಏನೂ ಕೆಲಸ ಮಾಡಿಸಿಕೊಳ್ಳುತ್ತಿರಲಿಲ್ಲ. ಬೆಡ್‌ಪ್ಯಾನ್ ತೆಗೆದುಕೊಳ್ಳಲು ಒಪ್ಪಲೇ ಇಲ್ಲ. ನಾನು ಚೆನ್ನಾಗಿಯೇ ಇದ್ದೇನೆ ಡಾಕ್ಟರು ಸುಮ್ಮನೆ ಹೆದರಿಸುತ್ತಾರೆ ಅಷ್ಟೆ ಎಂದು ಹಠಮಾಡಿ ಪಕ್ಕದಲ್ಲಿದ್ದ ಬಾತ್‌ರೂಮಿಗೆ ಹೋಗುತ್ತಿದ್ದರು.

ತಾವೇ ಬೆಳಗಿನ ಕೆಲಸ ಮುಗಿಸಿ ಬಟ್ಟೆ ಬದಲಾಯಿಸಿಕೊಂಡರು ಹಗಲು

ಮಲಗಿಯೇ ಇದ್ದರು. ರಾತ್ರಿ ಬಹಳ ಜೋರಾಗಿ ಎದೆನೋವು ಎಂದರು. ಬೆಳಗಿನವರೆಗೆ ಹಾಗೂ ಹೀಗೂ ಕಳೆಯಿತು. ಮತ್ತೆ ಎದೆ ನೋವು. ಚಿತ್ರದುರ್ಗದಲ್ಲಿ ಯಾವ ಅನುಕೂಲಗಳೂ ಇರಲಿಲ್ಲ ಬೆಂಗಳೂರಿಗೆ ಕರೆದುಕೊಂಡು ಹೋಗುವುದೆಂದು ಬೆಂಗಳೂರಿನ ಡಾಕ್ಟರೂ ನಿಜಲಿಂಗಪ್ಪನವರೂ ತೀರ್ಮಾನಿಸಿದರು.

ಮುರಿಗೆಮ್ಮನವರಿಗೆ ತಮ್ಮ ಮನೆಯನ್ನು ಬಿಟ್ಟು ಹೋಗುವ ಮನಸ್ಸೇ ಇರಲಿಲ್ಲ. ಎಲ್ಲರ ಒತ್ತಾಯಕ್ಕೆ ಒಪ್ಪಿದರು. ದೊಡ್ಡ ಕಾರಿನ ಏರ್ಪಾಡಾಗಿ ಹೊರಡಲು 12 ಗಂಟೆಯೇ ಆಯಿತು. ರಾತ್ರಿ ತೆಗೆದುಕೊಂಡ ಮಾತ್ರೆಗಳ ಪರಿಣಾಮ, ಬೆಂಗಳೂರಿಗೆ ಹೋಗುವವರೆಗೆ ಮಂಪರನಲ್ಲಿಯೇ ಇದ್ದರು. ಆಸ್ಪತ್ರೆಯಲ್ಲಿ ಎಲ್ಲಾ ಏರ್ಪಾಡಾಗಿತ್ತು. ಬೆಂಗಳೂರಿನಲ್ಲಿದ್ದ ಮಕ್ಕಳೆಲ್ಲಾ ಸೇರಿದ್ದರು. ಐ.ಸಿ.ಯೂ. ನಲ್ಲಿ ಮಲಗಿಸಿದ್ದರು. ಔಷಧ, ಇಂಜಕ್ಷನ್ ಎಲ್ಲಾ ಕೊಟ್ಟರು. ಸಣ್ಣ ರೂಮು–ಒಂದು ಮಂಚ, ಒಂದು ಕುರ್ಚಿ ಅಷ್ಟೆ. ಹಿಂದೆ ಅವರ ಹೃದಯದ ಬಡಿತವನ್ನು ತೋರಿಸುತ್ತಿದ್ದ ಮಾನೀಟರ್. ಬೇಡವೆಂದರೂ ಕಣ್ಣು ಅದರ ಮೇಲೆಯೇ. ಡಾಕ್ಟರು ಆಗಾಗ ನೋಡಿಕೊಂಡು ಹೋಗುತ್ತಿದ್ದರು. ಫ್ರಿಜ್‌ನ ಹಾಲು, ಹಣ್ಣಿನ ರಸ, ನೀರು ಮುರಿಗೆಮ್ಮನವರಿಗೆ ತಣ್ಣನೆಯದನ್ನು ಕುಡಿದು ಅಭ್ಯಾಸ ಇರಲಿಲ್ಲ. ಫ್ಯಾನ್ ಯಾವಾಗಲೂ ತಿರುಗುತ್ತಿತ್ತು.

ಆಸ್ಪತ್ರೆಯಲ್ಲಿ ಗೌನನ್ನು ಹಾಕಿ ಎರಡು ಜಡೆ ಹಾಕಿದ್ದರು. ಹೂನವ್ವ, ನಾನು ಈಗ ಫ್ಯಾಷನ್ ಮಾಡುತ್ತಿದ್ದೇನೆ ಎಂದು ಅಂತಹ ಸಂದರ್ಭದಲ್ಲಿಯೂ ತಮಾಷೆ ಮಾಡುತ್ತಿದ್ದರು. ಸ್ಪಂಜ್ ಬಾತ್ ಮಾಡಿಸಲು ಒಬ್ಬಳೇ ದಾದಿ ಬರುತ್ತಿದ್ದಳು. ಎದೆ ನೋವಿರುವವರಿಗೆ ಇಬ್ಬರು ದಾದಿಯರು ಬರಬೇಕು ಇಲ್ಲವಾದರೆ ರೋಗಿಗೆ ಆಯಾಸವಾಗುತ್ತದೆ ಎಂದು ದೊಡ್ಡ ಡಾಕ್ಟರಿಗೇ ಹೇಳಿದರು. 5–6 ದಿನಗಳಲ್ಲಿ ಕೆಮ್ಮು ಶುರುವಾಯಿತು. ಬೇಧಿಯ ತೊಂದರೆ. ಆಗಾಗ ಎದೆನೋವು ಬರುತ್ತಲೇ ಇತ್ತು ಔಷಧ ಇಂಜಕ್ಷನ್ ಕೊಟ್ಟರೂ ಸಹ

ಊಟದಲ್ಲಿ ಮಾತಿನಲ್ಲಿ ಆಸಕ್ತಿ ಕಡಿಮೆಆಗಿ ಹೋಯಿತು. ಮುಖದ ಕಳೆಯೂ ಕಡಿಮೆಯಾಯಿತು.

ನಿಜಲಿಂಗಪ್ಪನವರು ಕುಮಾರ ಕೃಪಾದ ಅತಿಥಿ ಗೃಹದಲ್ಲಿರುತ್ತಿದ್ದರು. ಪ್ರತಿದಿನ ಮೂರು ಸಲ ಬಂದು ಮಾತನಾಡಿಸಿ ಹೋಗುತ್ತಿದ್ದರು. ಅವರು ಬರುವ ಸಮಯವಾದಾಗ ಕಾರಿನ ಬಾಗಿಲು ತೆಗೆದು ಹಾಕಿದ ಸದ್ದು ಕೇಳಿದ ಕೂಡಲೇ, ಹತ್ತಿರ ಇದ್ದವರಿಗೆ, ರಾಯರು ಬಂದರು. ಕರೆದುಕೊಂಡು ಬಾ ಎನ್ನುತ್ತಿದ್ದರು. ನಿಜಲಿಂಗಪ್ಪನವರಿಗೆ ಕಣ್ಣಿನ ಆಪರೇಷನ್ ಆಗಿದ್ದುದರಿಂದ, ಕತ್ತಲಿಂದ ಬೆಳಕಿಗೆ, ಬೆಳಕಿನಿಂದ ಕತ್ತಲೆಗೆ, ಕಣ್ಣುಗಳದೃಷ್ಟಿ ಬೇಗ ಹೊಂದಿಕೊಳ್ಳುತ್ತಿರಲಿಲ್ಲ. ಮೆಟ್ಟಲುಗಳೂ ಸರಿಯಾಗಿ ಕಾಣಿಸುತ್ತಿಲಿಲ್ಲ. ಯಾರಾದರೂ ಕೈಹಿಡಿದು ಕರೆದುಕೊಂಡು ಬರಬೇಕಾಗಿತ್ತು. ಮುರಿಗೆಮ್ಮನವರ ಹತ್ತಿರ ಮೆಲುದನಿಯಲ್ಲಿ ಸ್ವಲ್ಪಹೊತ್ತು ಮಾತನಾಡಿ ಹೋಗುತ್ತಿದ್ದರು.

ಅವತ್ತು ದಸರಾ ಅಮವಾಸ್ಸೆ 10-10-1988, ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ ಎಂದು ತಿಳಿದ ಕೂಡಲೇ ಹತ್ತು ಗಂಟೆಯ ಹೊತ್ತಿಗೆ ಎಲ್ಲಾ ಮಕ್ಕಳೂ ಅಲ್ಲಿ ಸೇರಿದ್ದರು. ನಿಜಲಿಂಗಪ್ಪನವರೂ ಬಂದಿದ್ದರು. ಕಾಫಿ ಕುಡಿಯುತ್ತೀ ಏನವ್ವ ಎಂದು ಮಗಳು ಕೇಳಿದಳು. ಕೊಡು ಎಂದು, ತಾವೇ ಲೋಟ ಹಿಡಿದು ಕುಡಿದರು. ಒಂದು ಲವಂಗ ಕೊಡು ಎಂದರು. ಬಾಯಿ ವಾಸನೆ ಆಗುತ್ತದೆ ಎಂದು ಆಗಾಗ್ಗೆ ಲವಂಗ ಬಾಯಿಯಲ್ಲಿ ಇಟ್ಟು ಕೊಳ್ಳುತ್ತಿದ್ದರು. ಹತ್ತಿರ ಕುಳಿತಿದ್ದ ನಿಜಲಿಂಗಪ್ಪನವರಿಗೆ ನೀವು ಕುಮಾರ ಕೃಪಾಕ್ಕೆ, ಹೋಗಿರಿ, ನಾನು ಚೆನ್ನಾಗಿದ್ದೇನೆ ಎಂದರು. ಅವರಿನ್ನೂ ಕಾರಿನ ಹತ್ತಿರ ಹೋಗಿರಲಿಲ್ಲ. ಆಗಲೇ ಅವರ ಪ್ರಾಣಪಕ್ಷಿ ಹಾರಿಹೋಯಿತು. ಕಣ್ಣು ಗುಡ್ಡೆ ಮೇಲೆ ಹೋದವು. ಹೃದಯದ ಬಡಿತ ತೋರಿಸುವ ಗೆರೆ ನೆಟ್ಟಗೆ ಒಂದೇ ಗೆರೆಯಾಯಿತು. ಡಾಕ್ಟರುಗಳು ಮಕ್ಕಳನ್ನೆಲ್ಲಾ ಹೊರಗೆ ಕಳಿಸಿ ವೈದ್ಯತಪಾಸಣೆ ಕೆಲಸ ಮಾಡಿದರು. ಎದೆ ಒತ್ತಿದರು. ಆದರೆ ಎಲ್ಲಾ ಮುಗಿದೇ ಹೋಗಿತ್ತು. ನಿಜಲಿಂಗಪ್ಪನವರ ದುಃಖ ನೋಡಿ ಅವರಿಗೇನಾಗುವುದೋ ಎಂದು ಮಕ್ಕಳು



ಶ್ರೀ ನಿಜಲಿಂಗಪ್ಪರವರ ಷಷ್ಟಪೂರ್ತಿ ಸಂದರ್ಭದಲ್ಲಿ

ಹೆದರಿದರು. ಐದು ನಿಮಿಷಗಳ ಹಿಂದೆ ಚೆನ್ನಾಗಿದ್ದ ಅವ್ವ ಈಗ ಬರೀ ದೇಹ. ಆಗಲೇ ಹಣೆ ತಣ್ಣಗಾಗುತ್ತಾ ಬಂದಿತು. ಮಾಡುವ ಕ್ರಿಯೆಗಳನ್ನು ಮಾಡಿ, ಬಿಳಿ ಶುಭ್ರ ಖಾದಿಸೀರೆಯನ್ನು ಉಡಿಸಿ ಮಲಗಿಸಿದರು. ಶಾಂತವಾಗಿತ್ತು ಮುಖ. 9 ಜನ ಮಕ್ಕಳು, 22 ಜನ ಮೊಮ್ಮಕ್ಕಳು, ಅಪಾರ ಮರಿಮಕ್ಕಳು, ಪರಿವಾರ, ಪತಿಯನ್ನು ಬಿಟ್ಟು, ಚಿರನಿದ್ರೆಗೆ ಹೋಗಿದ್ದರು.

ಚಿತ್ರದುರ್ಗಕ್ಕೆ ದೇಹವನ್ನು ಒಯ್ದಾಗ ರಾತ್ರಿ 8 ಗಂಟೆ. ವಿಷಯ ತಿಳದ ಊರವರು ಆಗಲೇ ಮನೆ ಮುಂದೆ ಸೇರಿದ್ದರು. ದೇಹವನ್ನು ದೊಡ್ಡ ಮಂಜುಗಡ್ಡೆಗಳ ಮೇಲೆ ರಾತ್ರಿ ಎಲ್ಲಾ ಇಟ್ಟಿದ್ದರು. ಕೆನಡಾದಲ್ಲಿದ್ದ ಕೊನೆಯ ಮಗಳು ಟೊರೆಂಟೋದಿಂದ ಹೊರಟು ಮರುದಿನ ಬೆಳಿಗ್ಗೆ ಬೆಂಗಳೂರಿಂದ ಕಾರಿನಲ್ಲಿ ಚಿತ್ರದುರ್ಗಕ್ಕೆ ಬರುವವಳಿದ್ದಳು. ಅವಳಿಗೆ ತಾಯಿ ತೀರಿಕೊಂಡ

ಕಲ್ಪನೆಯೇ ಇರಲಿಲ್ಲ. ಮನೆಗೆ ಬಂದು ತಾಯಿಯನ್ನು ನೋಡಿದ ಮೇಲೆ ದುಃಖದಕಟ್ಟೆ ಒಡೆಯಿತು.

ಚಿತ್ರದುರ್ಗದಿಂದ ಐದು ಕಿಲೋಮೀಟರ್ ದೂರದಲ್ಲಿದ್ದ ಸಿದ್ದವ್ವನಹಳ್ಳಿಯ ನಮ್ಮ ಕುಟುಂಬದ ಸ್ನೇಹಿತರಾದ ವಿವೇಕಾನಂದಯ್ಯ ನವರ ಹೊಲದಲ್ಲಿ, ಸಾಯಂಕಾಲ ಐದು ಗಂಟೆಗೆ ಮಣ್ಣಾಯಿತು. ನಂತರದ ದಿನಗಳಲ್ಲಿ ಸಾಮಾಧಿ ಇದ್ದ ಜಮೀನನ್ನು ನನ್ನ ತಂಗಿ ಶ್ರೀಮತಿ ಪ್ರತಿಭಾದೇವಿ ಮುದ್ದಪ್ಪ ಇವರು ಕರೀದಿಸಿದರು. ಮುರಿಗೆಮ್ಮನವರು ಯಾವಾಗಲೂ ನನ್ನ ಮಕ್ಕಳನ್ನು ಕಲ್ಲು ಮುಳ್ಳಿನಲ್ಲಿ ಬೆಳೆಸಿಲ್ಲ ಹೂವಿನ ಬುಟ್ಟಿಯಲ್ಲಿ ಬೆಳೆಸಿದ್ದೇನೆ ಎನ್ನುತ್ತಿದ್ದರು. ಹೆಣ್ಣು ಮಕ್ಕಳು ಬೆಂಗಳೂರಿಂದ ದೊಡ್ಡ ಎರಡು ಬುಟ್ಟಿ ತುಂಬಾ ಮಲ್ಲಿಗೆ ಹೂವನ್ನು ತಂದಿದ್ದರು. ಸೂರ್ಯ ಕಾಂತಿಯ ಹೂವಿನ ಹೊಲದಲ್ಲಿ ಮಲ್ಲಿಗೆ ಹೂಗಳ ಮಧ್ಯ ಶಾಂತಳಾಗಿ ವಿಶ್ರಮಿಸಿದ್ದಾಳೆ ಎನಿಸಿತು 9 ಜನ ಮಕ್ಕಳಿಗೆ. 62 ವರ್ಷ ಬಿಡುವಿಲ್ಲದ ಸಂಸಾರದ ನೊಗವನ್ನು ಹೊತ್ತ ಜೀವಕ್ಕೆ ವಿಶ್ರಾಂತಿ ಅವಶ್ಯವಾಗಿತ್ತು. ಸರಿಯಾದ ಸಮಯಕ್ಕೆ ಹೋದರೆಂದು ಮಕ್ಕಳೆಲ್ಲರ ಅನಿಸಿಕೆ. ಆದರೆ ಅವ್ವ ಅವ್ವನೇ 41 ರಿಂದ 60 ವರ್ಷಗಳ ವರೆಗಿನ ಮಕ್ಕಳು ಅನಾಥರಾದರು. ಅವಳ ಜಾಗವನ್ನು ಯಾರೂ ತುಂಬಲಾರರು. ಮಕ್ಕಳಿಗೆ ಮನೆ ಎಂದರೆ ಅವ್ವನೇ.

## ದಿವಂಗತೆ ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪನವರ ಬಗ್ಗೆ ಗಣ್ಯರ ನುಡಿನಮನ

**ಶ್ರೀಮತಿ ಮೋಟಮ್ಮ**
ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತು

"ಶ್ರೀಮತಿ ಮುರಿಗೆಮ್ಮ ನಿಜಲಿಂಗಪ್ಪನವರು ದಿವಂಗತ ನಿಜಲಿಂಗಪ್ಪನವರ ಜೀವನದ ಕಷ್ಟ-ಸುಖದಲ್ಲಿ ಭಾಗಿಯಾಗಿ ಎಲ್ಲಾ ಸಮಯದಲ್ಲೂ ಅವರ ಬೆನ್ನೆಲುಬಾಗಿ ಅವರ ಕೀರ್ತಿಗೆ ಕಾರಣರಾಗಿರುತ್ತಾರೆ. ಪ್ರತಿಪುರುಷನ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಕಾರಣವೆಂಬ ನಾಣ್ಣುಡಿ ಶ್ರೀಮತಿ ಮುರಿಗೆಮ್ಮ ರವರಿಂದ ಸತ್ಯವಾಗಿರುತ್ತದೆ"

**ಶ್ರೀ ಎಂ. ವಿ. ರಾಜಶೇಖರನ್‌ರವರು**
ಮಾಜಿ ಯೋಜನಾ ರಾಜ್ಯಸಚಿವರು, ಭಾರತ ಸರ್ಕಾರ

ನಮ್ಮೆಲ್ಲರ ನೆಚಿನ ನಾಯಕರಾಗಿದ್ದ ಡಾ. ನಿಜಲಿಂಗಪ್ಪನವರ ರಾಷ್ಟ್ರಜೀವನವು ಉತ್ತುಂಗ ಶಿಖರಕ್ಕೆ ಏರಲು ಕಾರಣೀಭೂತರಾಗಿ ಅವಿರತವಾಗಿ ಜೀವನದುದ್ದಕ್ಕೂ ಜೊತೆ ಕೈಜೋಡಿಸಿದಂತಹ ಮತ್ತು ಅವರ ಏಳಿಗೆಗೆ ಮಹತ್ತರ ಪಾತ್ರವಹಿಸಿದಂತಹ ಅವರ ಜೀವನ ಸಂಗಾತಿ, ಧರ್ಮಪತ್ನಿಯಾಗಿ ಹಾಗೂ ತ್ಯಾಗಮಯ ಜೀವನ ಸವೆಸಿದವರು ಶ್ರೀಮತಿ ಮುರಿಗೆಮ್ಮನವರು.

**ಶ್ರೀ ಹೆಚ್. ಜಿ. ಗೋವಿಂದ ಗೌಡ**
ಮಾಜಿ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ

ಮಾಜಿ ಮುಖ್ಯ ಮಂತ್ರಿನಿಜಲಿಂಗಪ್ಪನವರು ನಿಸ್ವಾರ್ಥರೂ ಸರಳಜೀವಿಗಳೂ ಆದರ್ಶಪ್ರಯರೂ ಆಗಿ ಜೀವನಡೆಸಿದವರು. ರಾಷ್ಟ್ರಜೀವಿಗಳೂ ಆದರ್ಶ ಪ್ರಾಯರೂ ಆಗಿ ಜೀವನ ನಡೆಸಿದವರು. ರಾಷ್ಟ್ರಜೀವನದ ಉತ್ತುಂಗಶಿಖರಕ್ಕೆ ಏರುವಲ್ಲಿ ಎಲೆಮರೆಯ ಕಾಯಿಯಾಗಿ ಮಹತ್ವದ ಪಾತ್ರ ವಹಿಸಿದವರು ಅವರ ಧರ್ಮಪತ್ನಿ ಮುರಿಗೆಮ್ಮನವರು. ಶ್ರೀ ನಿಜಲಿಂಗಪ್ಪನವರ ಯಶಸ್ಸು ಅವರ ಪತ್ನಿ ಮುರಿಗೆಮ್ಮ ಅವರಿಗೂ ಸಲ್ಲಬೇಕು.

**ಶ್ರೀ ಅಲ್ಲಂ ಗುರುಬಸವರಾಜ**
ಅಧ್ಯಕ್ಷರು ವಿದ್ಯಾವರ್ಧಕಸಂಘ, ಬಳ್ಳಾರಿ

ದಿವಂಗತ ನಿಜಲಿಂಗಪ್ಪನವರ ಸಹಧರ್ಮಿಣಿಯಾಗಿ ಅವರ ಸಾಧನಾಮಾರ್ಗದ ಒಡನಾಡಿಯಾಗಿ, ಪತಿಯುಶ್ರೇಯಸ್ಸಿಗೆ ಮರೆಯಲ್ಲಿದ್ದುಕೊಂಡೇ ತಪಸ್ಸುಗೈದ ಮಹಾಸಾಧ್ವಿ ಶ್ರೀಮತಿ ಮುರಿಗೆಮ್ಮನವರು. "ಮಹಾಪುರುಷ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇದ್ದೇಇರುತ್ತಾಳೆ" ಎಂಬ ಲೋಕೋಕ್ತಿಗೆ ಒಂದು ಉದಾಹರಣೆಯಿದ್ದಂತೆ ಶ್ರೀಮತಿ ಮುರಿಗೆಮ್ಮನವರು. ಅಂಥವರ ನೆನಪೂ ಮಾಡಿಕೊಳ್ಳುವುದೇ ಇಂದಿನ ಜನಾಂಗಕ್ಕೆ ಒಂದು ಸಾತ್ವಿಕತೆಯ ಸಂದೇಶ ನೀಡಿದಂತೆ.

**ಶ್ರೀ ಎಸ್. ಉಮಾಕಾಂತ**
ವಿಶ್ರಾಂತ ಪ್ರೊಫೆಸರ್, ಶ್ರೀನಗರ, ಧಾರವಾಡ

ಆಗಿನಕಾಲದ ಎಲ್ಲ ಸ್ವತಂತ್ರಯೋಧರ ಧರ್ಮಪತ್ನಿಯರುಗಳಂತೆ ನಮ್ಮ ತಾಯಿಯವರೂ ನಮ್ಮ ತಂದೆಯವರ ದೇಶ ಸೇವೆಗೆ ನೆರವಾಗಿ ನಿಂತು ತೀವ್ರಬಡತನದಲ್ಲೂ ಧೃತಿಗೆಡದೆ ಸಂಸಾರವನ್ನು ತೂಗಿಸಿಕೊಂಡು ಹೋದರು. ಅಧಿಕಾರಬಂದಾಗಲೂ ತಮ್ಮ ಅದರ್ಶಗಳನ್ನು ಕಾಪಾಡಿಕೊಂಡು ಪ್ರಾಮಾಣಿಕ ಜೀವನವನ್ನು ಮುಂದುವರಿಸಿದರು. ಹೀಗೆ ಪರೋಕ್ಷವಾಗಿ ದೇಶ ಸೇವೆಮಾಡಿದ ಇಂತಹ ದಿಟ್ಟ ಆದರ್ಶ ಮಹಿಳೆಯರಿಗೆ ನಮ್ಮ ಸಮಾಜ ಅವರಿಗೆ ಸಲ್ಲಬೇಕಾದ ಗೌರವವನ್ನು ನೀಡದಿರುವುದು ವಿಷಾದನೀಯ.

ದೇವಸಮುದ್ರದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರಿಂದ
ಶ್ರೀಮತಿ ಮುರಿಗೆಮ್ಮ ಎಸ್. ನಿಜಲಿಂಗಪ್ಪ ಸಮುದಾಯ ಭವನದ ಶಂಕುಸ್ಥಾಪನೆ

ದೇವಸಮುದ್ರದಲ್ಲಿ ನಿರ್ಮಾಣವಾಗಿರುವ ಶ್ರೀಮತಿ ಮುರಿಗೆಮ್ಮ ಎಸ್. ನಿಜಲಿಂಗಪ್ಪ ಸಮುದಾಯ ಭವನ